ಕೊರವಂಜಿ



ಅಕ್ಟೋಬರ್ ೧೯೪೩

ಮಾಸ ಪತ್ರಿಕೆ

ಸಂಪಾದಕರು :
ಶ್ರೀ॥ ರಾ. ಶಿ.

ಚಿತ್ರಕಾರರು :
ಶ್ರೀ॥ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ॥ ನಾ. ಕ.
ಶ್ರೀ॥ ಕೇಸರಿ
ಶ್ರೀ॥ ಪಾಟಾಳಿ
ಶ್ರೀ॥ ಕುಸುಮ
ಶ್ರೀ॥ ಪಿ. ಗುರುವಣ್ಣ
ಶ್ರೀ॥ ಬೀರಣ್ಣ
ಶ್ರೀ॥ ಎಸ್. ಎನ್. ಶಿ
ಶ್ರೀ॥ ಬಿದಿರೆ
ಶ್ರೀ॥ ಕೇಫ

ಬಿಡಿ ಪತ್ರಿಕೆ -- ಕೇವಲ ಎರಡಾಣೆ

ನಗೆಯ ಮಾಸ ಪತ್ರಿಕೆ.

ಕೊರವಂಜಿ

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦

ಬಿಡಿ ಪ್ರತಿ ಕೇವಲ ಆಣೆ ೦—೨—೦

ವಿಷಯಾನುಕ್ರಮಣಿಕೆ

ಭಾರತೀಯ ಕಾರ್ಮಿಕರಿಂದ

ಭಾರತೀಯ ಬಂಡವಾಳಗಾರರಿಂದ

ಭಾರತೀಯ ಕಲಾಕೌಶಲ್ಯದಿಂದ

ಕೂಡಿರುವುದೇ

•

ಬೆಂಗಾಲ್ ಲ್ಯಾಂಪ್ಸ್

ತಯಾರಿಕೆಯ ವೈಶಿಷ್ಟ್ಯ


—

ಭಾರತದಲ್ಲೆಲ್ಲಾ ಉತ್ತಮವಾದುದೆಂದು

ಖ್ಯಾತಿಪಡೆದಿದೆ

ಜಬ್ ಕೊ

ಸುಪ್ರಸಿದ್ಧ ಭಾರತೀಯ
ತಯಾರಿಕೆಗಳ ಅಂಕಿತ.
ಅವುಗಳು ಉತ್ಕೃಷ್ಟತೆ
ಬೆಲೆ ಇವುಗಳನ್ನು ಸರಿತೂಗಿಸುತ್ತವೆ.
ಪರದೇಶೀಯರಿಂದಲೂ
ಮನ್ನಣೆ ಪಡೆದಿರುವುವು.



ಸಂಪುಟ ೩] ಕೊರವಂಜಿ—ಅಕ್ಟೋಬರ್ ೧೯೪೩ [ಸಂಚಿಕೆ ೭

ಕುಹಕಿಡಿಗಳು

ರೇಷನಿಂಗ್ ಕಛೇರಿಗಳಿಗೆ ವರ್ಗ ಮಾಡಿಕೊಳ್ಳುವುದಕ್ಕೂ ಬೆಣ್ಣೆ ಬೆಲೆಯು ವಿಪರೀತ ಏರಿರುವುದಕ್ಕೂ ಏನೂ ಸಂಬಂಧವಿಲ್ಲವಂತೆ!

✤ ✤ ✤

ಆಹಾರ ಸರಪರಾಜು ಇಲಾಖೆಯ ಹಲವಾರು ಜನರು ಚೌತಿ ಚಂದ್ರನನ್ನು ನೋಡಿಯೇ ಇದ್ದಿರಬೇಕು.

✤ ✤ ✤

ರೇಷನ್ ಕಾಲದಲ್ಲಿ ಮೂಷಕವಾಹನನಾಗುವುದು ಒಳ್ಳೆಯದು.

—ಮೂಷಕನಿಂದಾದರೂ ಅಕ್ಕಿ ಸಿಗಬಹುದು—ಅದಕ್ಕೇ ಈಗಲೂ ಗಣೇಶ ಮೊದಲಿನಂತೆಯೇ—

✤ ✤ ✤

ರಾಗಿ ಬೆಲೆ ಆರು ಸೇರು ಆದಾಗಿನಿಂದ ಹಲವಾರು ಕವಿಗಳು ಪದ್ಯಗಳನ್ನು ಗೊಂಚಲು ಗೊಂಚಲಾಗಿ ಬರೆದಿರುವರಂತೆ.

—ಹಾಡು ಕೇಳಿ ಹಸಿವು ಇಂಗಲಿ ಎಂದೇ?

ಇಂಗ್ಲೀಷ ಕಡಲ್ಗಾಲುವೆಯ ಮೇಲೆ ಕೂಡ ಪುರಂದರ ದಾಸರು ಹಾಡು ಕಟ್ಟಿ ಹಾಡಿದ್ದಾರೆ.

—ಈಜ ಬೇಕು—ಈಜಿ—ಜೈಸಬೇಕು.

✤ ✤ ✤

ಖಾಸ್ ಬಂಗಲೆಯಲ್ಲಿರುವ ಬಿಳಿ ಕರಡಿಗಳಿಗೆ ದಿನಕ್ಕೆ ಎರಡು ಸೇರು ಅನ್ನ ಎರಡು ಸೇರು ಬೆಣ್ಣೆ ಕೊಡುತ್ತಾರಂತೆ.

—ಅಯ್ಯೋ ನಾವೂ ಕರಡಿಗಳಾಗಿ ಹುಟ್ಟಬಾರದಾಗಿತ್ತೆ ?

✤ ✤ ✤

'ಇಂತಹ ಕಷ್ಟಕಾಲದಲ್ಲಿ ನಮ್ಮಿಂದ ಏನು ಸಹಾಯ ಬೇಕಾದರೂ ಮಾಡುತ್ತೇವೆ' ಎಂದು ಸಾರ್ವಜನಿಕ ಭಾಷಣಕಾರರು.

—ಒಂದೇ ಸಹಾಯ ಬೇಡುತ್ತೇವೆ "ಸಾರ್ವಜನಿಕ ಭಾಷಣ ನಿಲ್ಲಿಸಿದರೆ ಮಹದೋಪಕಾರ"

✤ ✤ ✤

——o——

ಭಾರತಕ್ಕೆ ಇನ್ನೊಬ್ಬ ಸೈನ್ಯಾಧಿಕಾರಿಯನ್ನು ನಿಯಮಿಸುವುದಕ್ಕಾಗಿ ವೇವಲ್‌ರವರು ವೈಸ್ರಾಯಿ ಪದವಿಯನ್ನೇರಿದರು ಎಂಬ ಮಾತು ಸುತರಾಂ ನಂಬತಕ್ಕದ್ದಲ್ಲ.

* *

ಕೆಮ್ಮಣ್ಣಿನ ಮೇಲೆ ಮಲಗಿದರೆ ಮೈ ಕೈ ನೋವೆಲ್ಲ ಮಾಯವಾಗುತ್ತದೆ.
(ಆರೋಗ್ಯ ಪತ್ರಿಕೆ)

ಈ ಮಾತು ನಿಜವಲ್ಲವೆಂದು ಜಟ್ಟಿಗಳನೇಕರು ವಾದಿಸುತ್ತಾರೆ.

* *

ಹುರಿಗಾಳು

ಏನು! ಪಾತಮ್ಮನವರೇ! ಹೊಸ ಸೀರೆ?.......

ಹುಂ! ಹಠ ಹಿಡಿದೆ. ಅತ್ತೆ ಬಂದು ಕೂತಿದೆಯಲ್ಲಾ, ಮೂರು ತಿಂಗಳಿಂದ! ಊರಿಗೆ ಕಳುಹಿಸುತ್ತೀರೋ, ಹೊಸ ಸೀರೆ ಕೊಡುತ್ತೀರೋ, ಅಂದೆ!

ಮುಂದಿನ ಪಿತೂರಿ ಏನು?

ಒಂದು ಅವಲಕ್ಕಿ ಸರಾನೂ ಮಾಡಿಸಿಕೊಂಡುಬಿಟ್ಟು, ಬಾವಿಗೆ ಬೀಳುವ ಭಯ ತೋರಿಸಿ, ಊರಿಗೆ ಕಳುಹಿಸಿಯೇ ಬಿಡುತ್ತೇನೆ. ಸದ್ಯಕ್ಕೆ ಇಷ್ಟು ಸಾಕು.

✤ ✤ ✤

ರಸ್ತೆಗೆ ಅಡ್ಡವಾಗಿ ಕುದುರೆ ಲಾಳ ಸಿಕ್ಕಿದರೆ ತಮಗೆ ಬೇಗ ಮದುವೆಯಾಗುತ್ತದೆ, ಎಂದು ಚೀಣೀಯರು ನಂಬುತ್ತಾರೆ. ಇತರ ಕೆಲವು ದೇಶಗಳಲ್ಲಿ ತಮಗೆ ಒಳ್ಳೇದಾಗುತ್ತದೆ ಎಂದು ನಂಬುತ್ತಾರೆ.

✤ ✤ ✤

ಅಪ್ಪ! ಗಂಡಸರಿಗೆಲ್ಲ ನಿನ್ನ ಹಾಗೆ ಬಟ್ಟೆತಲೆ ಬರುತ್ತೋ.....ವಯಸ್ಸಾದರೆ?
ಇಲ್ಲ, ಸರೋಜ! ಎಲ್ಲರೂ ಎಲ್ಲಿ ಮದುವೆ ಮಾಡಿಕೊಳ್ಳುತ್ತಾರೆ!

✤ ✤ ✤

ಹರಿಶ್ಚಂದ್ರ ಕಾವ್ಯದಲ್ಲೇನಿದೆ? ಎಂಬ ಪ್ರಶ್ನೆಗೆ, ಒಬ್ಬ ವಿದ್ಯಾರ್ಥಿ ಸುಬ್ಬಯ್ಯ ನಾಯುಡು ಪುರಾಣ ಎಂದು ಬರೆದನಂತೆ.

✤ ✤ ✤

ನಾನು ನನ್ನ ಹೆಂಡತಿ ಹತ್ತಿರ ಮೊನ್ನೆ ಒಂದು ಮಾತು ಅಂದೆ. ಅಲ್ಲಿಂದೀಚೆಗೆ ಅವಳು ನನ್ನ ಹತ್ತಿರ ಮಾತನಾಡುವುದನ್ನೇ ನಿಲ್ಲಿಸಿಬಿಟ್ಟಿದಾಳೆ, ಗ್ರಹಚಾರ!

ಯಾವುದಯ್ಯಾ ಅದು, ಆ ಮಾತು! ಹೇಳೋ! ದಮ್ಮಯ್ಯ!

ಲೋ! ನೀನು ನಿನ್ನ ಮೇಷ್ಟರನ್ನ ಕಳ್ಳ ಅಂತ ಕೂಗಿದೆಯಾ!

ಹೂಂ, ಅಣ್ಣಾ!

ಥಡಿಯಾ, ಅಂತ ಕೂಗಿದೆಯಾ!

ಹೂಂ, ಅಣ್ಣಾ!

ಪೋಕರಿ, ಅಂದಿಯಾ?

ಹೂಂ, ಅಣ್ಣಾ! ಅಂದೆ!

ಓತಿಕ್ಯಾತ, ಅಂತ ಕೂಗಿದೆಯಾ?

ಇಲ್ಲ, ಅಣ್ಣಾ! ಜ್ಞಾಪಕಕ್ಕೆ ಬರಲಿಲ್ಲ, ಅಣ್ಣಾ!

✣ ✣ ✣

ನನ್ನ ಕವನಗಳನ್ನ ಹೋದ ವರ್ಷಕ್ಕಿಂತ ಈಗ ಎರಡರಷ್ಟು ಜನ ಪಠಿಸುತ್ತಿದಾರೆ!

ಏನು! ಮದುವೆ ಆಯಿತೆ ತಮಗೆ?

✣ ✣ ✣

ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳವರು ಚರ್ಚಿಲ್ಲರ ಇಂಗ್ಲಿಷನ್ನು ತಿದ್ದಿ, ಅದರಲ್ಲಿ ತಪ್ಪು ಕಂಡು ಹಿಡಿದು, ಪತ್ರಿಕೆಗಳಿಗೆ ಲೇಖನ ಬರೆದಿದ್ದಾರೆ!........ ಈಗ, ಚರ್ಚಿಲ್ಲರು ತಮಿಳು ಕಲಿಯುತ್ತಿದಾರಂತೆ.

✣ ✣ ✣

ಹೆಚ್ಚು ಆಹಾರ ಬೆಳೆವ ಯೋಚನೆ ಯೋಚಿಸಿದಷ್ಟು ಫಲಕಾರಿ ಆಗದೆ ಇದ್ದುದಕ್ಕೆ ಗೊಬ್ಬರದ ಅಭಾವವೇ ಮುಖ್ಯ ಕಾರಣವೆಂದೂ, ಮಲದಿಂದ ಗೊಬ್ಬರ ಮಾಡುವ ಪದ್ಧತಿಯನ್ನು ೧೪ ಪ್ರಾಂತಗಳಲ್ಲೂ ಅನುಸರಣೆಗೆ ತರಬೇಕೆಂದೂ ಒಬ್ಬರು ವಾದಿಸುತ್ತಾರೆ........ಸರಿ! ಅದಕ್ಕೂ ಹೆಚ್ಚು ಆಹಾರ ಬೇಕಾಗಿದೆಯಲ್ಲಾ!

✣ ✣ ✣

ಸರ್ವಭಕ್ಷಕರೊಬ್ಬರು ಬೆಂಗಳೂರಲ್ಲಿ ಗಾಜು, ಬ್ಲೇಡು ಮುಂತಾದುವುಗಳನ್ನು ತಿಂದರಂತೆ........ಡಿಪೋ ಅಕ್ಕಿ ಅನ್ನ ತಿಂದರೋ?

"ಶ್ರೀ ಪಿಕ್ಚರ್ಸ್ ಅಂದರೆ, ಹೆಚ್. ಆರ್. ಜಿ. ಸಿ ಶ್ರೀ ಪಿಕ್ಚರ್ಸ್ ಎಂದು ಭಾವಿಸಬಾರದು!" (ಸಹವಾಸ ಪತ್ರಿಕೆ)

ಹಾಗೆ ಖಚಿತವಾಗಿ ಹೇಳಿಬಿಡುವುದೇ ಉತ್ತಮ.

* * *

"ಸಂಗೀತ ವಿದ್ಯಾತರ್ಪಣ" ಬೆಲೆ ೨ ರೂಪಾಯಿ.

ಈ ಗ್ರಂಥವನ್ನು ಅನುಸರಿಸಿ ಕಲಿತ ವಿದ್ವಾಂಸರನೇಕರನ್ನು ನಾವು ಕೇಳಿದ್ದೇವೆ.

* * *

ಬೆಂಗಳೂರು ಸ್ಟೇಷನ್ನಲ್ಲಿ ಪ್ರಯಾಣಿಕರೊಬ್ಬರು ಚಿಲ್ಲರೆಗಾಗಿ ಸ್ಟೇಷನ್ ಮೇಷ್ಟ ರೊಂದಿಗೆ ಚರ್ಚೆ ನಡೆಸುತ್ತಿದ್ದಾಗ ರೈಲು ಹೊರಟೇಬಿಟ್ಟಿತಂತೆ. ಸಂಸ್ಥಾನದ ರೈಲುಗಳು ಸಮಯಕ್ಕೆ ಸರಿಯಾಗಿ ಹೊರಡುವುದಿಲ್ಲವೆಂಬ ಅಪಪ್ರಚಾರ ಮಾಡು ತ್ತಿದ್ದವರಿಗೆ ಇದು ತಕ್ಕ ಶಿಕ್ಷೆ.

* * *

ಅನೇಕ ವರ್ಷಗಳ ಕಾಲ ಯಾವುದೋ ಒಂದು ರೀತಿಯ ಖಾಯಿಲೆಯಿಂದ ನರಳಿ ನರಳಿ ಕಣ್ಣಿಗೆ ನಿದ್ದೆ ಹತ್ತದೆ ಇದ್ದವರೊಬ್ಬರು ಮೊನ್ನೆ ಪ್ರಜಾಪ್ರತಿನಿಧಿ ಸಭೆ ಯನ್ನು ಕಂಡು ಸ್ಫೂರ್ತಿಗೊಂಡರಂತೆ. ಮುಂದಿನ ಚುನಾವಣೆ ಕಾಲದಲ್ಲಿ ಅವರು ಉಮೇದುವಾರರಾಗಿ ನಿಂತು ಹಗಲಿರಳೂ ಪ್ರಯತ್ನಿಸಿ ಚುನಾಯಿತರಾಗಲು ಸಂಕಲ್ಪಿ ಸಿದಾರೆ.

* * *

ಐದು ವರ್ಷದ ಹಿಂದೆ ಬೆಂಗಳೂರಿಂದ ಕಾಶಿಗೆ ಕಾಲುನಡಿಗೆಯಲ್ಲೇ ಹೋಗಿದ್ದ ಬ್ರಾಹ್ಮಣ ದಂಪತಿಗಳು ಮೊನ್ನೆ ಹಿಂತಿರುಗಿದರಂತೆ.

ಯಾಕೆ ಬಂದರೋ, ಪಾಪ!

* *

ನವೀನ ಗಾದೆಗಳು

(ಬಟ್ಟೆ-ಬರೆ)

"ಕೌಪೀನವಂತಃ ಬಲು ಭಾಗ್ಯವಂತಃ" (ಇತಿ ಬಡವ ಗೀತಾ)

ಬಟ್ಟೆಯಿದ್ದಷ್ಟೂ, ಚಡ್ಡಿ ಹೊಲಸು!

ದೀಪಾವಳಿ ದಿನ, ಕೋಪಾವಳಿ

ಉಟ್ಟಿದ್ದು ನಮಗೆ, ಕೊಟ್ಟಿದ್ದು ಅಗಸನಿಗೆ.

ಹರಕು ಬಟ್ಟೆ ಕೊಡು ಅಂತ ಕಾಗದದ ಕಾರ್ಖಾನೆಯವರು ಕೇಳಿದರೆ,

ಆತ ಹರಕು ಕಾಗದಾನೇ ಉಟ್ಟು ಕೂತಿದಾನೆ!

ಅಂಗಿ ಹೋಲಿಯೋ ಬಡ್ಡಿಗೆ—ಗುಂಡಿ ಹೊಲಿಯುವವನೊಬ್ಬ!

ಗುಂಡಿಗೆ ಇಲ್ಲದಿದ್ದರೂ, ಗುಂಡಿ ಇದ್ದೇ ಇರಬೇಕಂತೆ!

ಮಾನ ಮುಚ್ಚೋಕೆ, ಥಾನ್ ಥಾನೇ ಬಿಚ್ಚಬೇಕೆ?

ಗೇಣುದ್ದ ಹೊಟ್ಟೆಗೆ, ಮಾರುದ್ದ ಬಟ್ಟೆ!

ಯುದ್ಧಕಾಲೇ ವಸ್ತ್ರಾಭಾಸಃ (ಇತಿ ಕೊರವಂಜಿಃ)

—ಕೇಸರಿ.

ರೇಡಿಯೋವನ್ನು ಕಾರಾಗೃಹಗಳಲ್ಲಿಡಕೂಡದೆಂದೂ, ನ್ಯಾಯಸ್ಥಾನಗಳಲ್ಲಿ ತಮಗೆ ವಿಧಿಸಿದ ಶಿಕ್ಷೆಗಳಲ್ಲಿ ಅದನ್ನು ಸೇರಿಸಿಲ್ಲವೆಂದೂ, ಖೈದಿಗಳು ಹೇಳುತ್ತಿರುವರಂತೆ.

* *

ಪ್ರಜಾ ಪಿಕ್ಚರ್ಸ್ ಎಂಬ ನೂತನ ಚಿತ್ರ ತಯಾರಿಕಾ ಸಂಸ್ಥೆಯ ಮೊದಲನೆಯ ಚಿತ್ರವಾದ ಉಮಾಂಗ್ ಎಂಬುದನ್ನು ಮುಲ್ತಾನಿಯವರು ದಿಗ್ದರ್ಶಿಸುವರಂತೆ. ಹಾಗಾದರೆ, ನಾವು ಕೊಂಚ ದಿನ ಹಾಯಾಗಿ ಚಿಕ್ಕಪೇಟೆಯ ದಾರಿಯಲ್ಲಿ ನಡೆಯಬಹುದು.

ಪ್ರಶ್ನೆಗೆ—ಉತ್ತರ

ನಮ್ಮ ದೇಶದ ಅತಿ ದೊಡ್ಡ ಕೈಗಾರಿಕೆ ಯಾವುದು ?

ತಿರುಪೆ !

ಅದಕ್ಕಿನ್ನೊಂದು ಹೆಸರು ಹೇಳಿ, ನೋಡೋಣ !

ಮಾಮೂಲ್ !

ವಿಶ್ವವಿದ್ಯಾನಿಲಯದ ಪದವೀಧರರಿಗೆ ಕರಿ ಅಂಗಿ ಏಕೆ ?

ವಿದ್ಯಾಗಣಪತಿ 'ಕರಿ'ವದನನಲ್ಲವೆ ?

ಹುಡ್ ಎಂಬುದಕ್ಕೆ ಸರಿಯಾದ ಅರ್ಥವೇನು ?

ಜೋಳಿಗೆ !

ಬೆಂಗಳೂರು ಮೈಸೂರು ನಗರಗಳ ಸ್ವಾಗತ ಸಮಿತಿಯ ಅಧ್ಯಕ್ಷ ಮಂಡಲಿ ಯಾವುದು ?

ಜಟಕಾದವರು !

ಈಗಿನ ಲಾರಿಗಳಿಗೆ ಆರು ಚಕ್ರಗಳು ಯಾಕೆ ?

ದಾರಿಹೋಕರಲ್ಲನೇಕರು ನಾಲ್ಕು ಚಕ್ರಗಳನ್ನೂ ತಪ್ಪಿಸಿಕೊಳ್ಳುತ್ತಿರುವುದರಿಂದ !

ವರ್ತಮಾನ ಇಲಾಖೆ ಭೂತಕಾಲದಲ್ಲಿತ್ತೆ ?

ಹೇಗಿದ್ದೀತು ?

ಹಾಲಿಗೆ ನೀರು ಬೆರಸುವುದಕ್ಕೆ ಯಾಕೆ ?


ಹಸುವಿಗೆ ಎಷ್ಟು ನೀರು ಕುಡಿಸಿದರೂ ಪ್ರಯೋಜನವಿಲ್ಲದಿರುವುದರಿಂದ !

ಕಾಗದವೇ ಸಿಗದ ಈ ಕಷ್ಟಕಾಲದಲ್ಲಿ ಯುದ್ಧಾನಂತರದ ಕೌಲು ಕರಾರುಗಳನ್ನ ಯಾವುದರ ಮೇಲೆ ಬರೆಯುತ್ತಾರೆ ?

ನೀರಿನ ಮೇಲೆ !

ಬಾಟಾಳಿ.

—o—



ನೋಡಿದ್ರಾ ರಾಯರನ್ನ—"ಕಾಯಕಲ್ಪ" ಮಾಡಿದಾಗಿನಿಂದ ಬರುತ್ತಾ ಬರುತ್ತಾ ಹೀಗೆ ಅಗಿಬಿಟ್ಟಿದ್ದಾರೆ.—

ಮಂಡೂಕ ಮಹರ್ಷಿ

ಹಿಂದಿನ ಹಳ್ಳಿ ಮೇಷ್ಟ್ರು ಗೋವಿಂದಯ್ಯನವರ ವಿಷಯ ನಿಮಗೆ ಗೊತ್ತಿದ್ದರೆ, ಮಂಡೂಕ ಮಹರ್ಷಿಗಳ ಕಥೆಯೂ ನಿಮಗೆ ಗೊತ್ತಿರುತ್ತಿತ್ತು. ಗೋವಿಂದಯ್ಯನವರು ತುಂಬಾ ಒಳ್ಳೆಯವರು. ಅಂದರೆ, ಈಗಿನ ಕಾಲಕ್ಕೆ ಅಂಥವರಲ್ಲ, ಅನ್ನಿ! ಶುದ್ಧ ಸತ್ವಗುಣದ ಮುದ್ದೆ! ದೇವರು ಅಂಥವರ ಬೆನ್ನ ಮೇಲೆಯೇ ಬರೆ ಎಳೆಯುವುದು. ಅಂಥವರ ಹೊಟ್ಟೆ ಮೇಲೆಯೇ ಬಡಿಯುವುದು. ಹೀಗಾಗಿ ಗೋವಿಂದಯ್ಯನವರ ಮುಖದ ಮೇಲೆ "ಅಯ್ಯೋ!" ಎಂದು ಬರೆದೇಯಿತ್ತು. "ಸಾಕಪ್ಪ ಈ ನರಜನ್ಮ!" ಎಂದು ಕೊರೆದೇಯಿತ್ತು. ಮನೆ ತುಂಬ ಮಕ್ಕಳು, ಎಲ್ಲಕ್ಕೂ ಕಜ್ಜಿ, ಹೆಂಡತಿಗೆ ಕ್ಷಯ, ಸೊಸೈಟಿ ಬಾಕಿ, ಇನ್ಸ್‌ಪೆಕ್ಟರ್‌ರವರ ಬೈಗಳು—ಕೇಳಬೇಕೆ, ಅವರ ತಾಪ ಪಂಚಕ! ಸಾಲದ್ದಕ್ಕೆ ಅವರಿಗೆ ಈಚೆಗೆ ಒಂದು ಗಂಡಾಂತರ ಬಡಿಯಿತು. ಅದೇ: ಮಹರ್ಷಿಗಳ ಸಹವಾಸ!

ಯಾವತ್ತೋ ಏನೋ, ದಾಹ ತಡೆಯಲಾರದೆ, ಹಿಂದಿನ ಹಳ್ಳಿಯ ಆಚೆ ಇರುವ ಇಳೀ ಭಾವಿಯಿಂದ ಅರಿಯದೆ ಒಂದು ಬೊಗಸೆ ನೀರು ಕುಡಿದಾಗ, ಸೇರಿಕೊಂಡುಬಿಟ್ಟಿತ್ತಂತೆ, ನೋಡಿ ಹಾಳು ಕಪ್ಪೆ ಮರಿ, ಅವರ ಉದರದೊಳಕ್ಕೆ. ಈಚೆಗೂ ಬರಲೊಲ್ಲದು! ಆಚೆಗೂ ಹೋಗಲೊಲ್ಲದು. ಬಾಡಿಗೆ ಇಲ್ಲ, ಕಂದಾಯವಿಲ್ಲ, ಮಳೆಯಿಲ್ಲ, ಬಿಸಿಲಿಲ್ಲ! "ಝುಂ" ಅಂತ ಮೂಗು ಹಿಡಿದುಕೊಂಡು, ಹೊತ್ತುಗೊತ್ತಿಗೆ ಊಟ ತಿಂಡಿ ಉಚಿತವಾಗಿ ಪಡೆಯುತ್ತಾ, ಕೂತೇಬಿಟ್ಟಿತು.

ಗೋವಿಂದಯ್ಯನವರಿಗೆ ಹಲವಾರು ದಿನಗಳವರೆಗೆ ವಿಷಯದ ಪರಿಜ್ಞಾನವೇ ಆಗಲಿಲ್ಲ. ಹೊಟ್ಟೆ ಮಂದ, ಹೊಟ್ಟೆ ಭಾರ, ಹೊಟ್ಟೆನೋವು, ವಾಯು, ವಾಕರಿಕೆ ಅಂತ ಅವರು ಗೊಣಗಿದಾಗಲೆಲ್ಲ ಅವರ ಹೆಂಡತಿ "ಸುಮ್ಮನಿರಿ, ಅಂದ್ರೆ!" ಅಂತ ಗದರಿಸಿ ಅವರನ್ನು ಸಮಾಧಾನಪಡಿಸುತ್ತಿದ್ದಳು. ಕಡೆಗೊಂದು ದಿನ ಮಹರ್ಷಿಗಳು ಕೆಳಹೊಟ್ಟೆಯಿಂದ ಗಂಟಲುತನಕ ಕುಪ್ಪಳಿಸಿದಾಗ, ಗೋವಿಂದಯ್ಯನವರಿಗೆ ಗಾಬರಿಯಾಯಿತು. ಅವರು ಅಯ್ಯೋ ಅಂತ ಕಿರಿಚಿಕೊಂಡು ಆಸ್ಪತ್ರೆಗೆ ಓಡಿದರು.

ಸರಿ! ಪ್ರಾರಂಭವಾಯಿತು, ಔಷಧಿ ಉಪಚಾರಗಳು ಶಾಸ್ತ್ರೋಕ್ತವಾಗಿ ವಾಂತಿಗೆ, ಭೇದಿಗೆ ಅಂತ ಇಂಗ್ಲೀಷಿನಲ್ಲಿರುವ ದ್ರಾವಕಗಳನ್ನೆಲ್ಲಾ ಕುಡಿದರು; ಗುಳಿಗೆಗಳನ್ನು ನುಂಗಿದರು; ಪುಡಿಗಳನ್ನು ತಿಂದರು. ಮೈಯೆಲ್ಲಾ ಚುಚ್ಚಿಸಿಕೊಂಡರು. ಕರುಳು ಕರುಳೇ ಕಿತ್ತು ಹೋದರೂ, ಆಸಾಮಿ ಮಾತ್ರ ಒಳಗೆ ಬಲವಾಗಿ ಕಚ್ಚಿ ಕುಳಿತೇ ಇತ್ತು. ಆಸ್ಪತ್ರೆ ಮುಗಿಯಿತು. ಆಯುರ್ವೇದವಾಯಿತು. ಜಾಪಾಳವಾಯಿತು. ನೇಪಾಳವಾಯಿತು. ಮಂತ್ರ, ಮಾಟ, ಮಾರಿ, ಕೋಳಿ, ಕೋಣ, ತಾಯಿತೆ, ತಂತ್ರ—ಎಲ್ಲವೂ ಸಾಂಗೋಪಾಂಗವಾಗಿ

ನೆರವೇರಿದುವು. ಊಹುಂ, ಜಗ್ಗಲೇ ಇಲ್ಲ, ಪ್ರಾಣಿ. ಯುನಾನೀನೂ ಮಾಡಿದರು. ಬಡಿದು ನೋಡಿದರು; ಹೊಟ್ಟೆ ಮೇಲೆ ಹೊಡೆದು ನೋಡಿದರು. ಉಪವಾಸ ಹಾಕಿದರು. ಮೆಣಸಿನ ಪುಡಿ ತಿನ್ನಿಸಿದರು. "ಹೋಗಾಚೆ!" ಎಂದು ಒಂದು ಚೀಟಿಯಲ್ಲಿ ಬರೆದು ಅದನ್ನು ನುಂಗಿಸಿದರು. ಬೆಸ್ತರವನೊಬ್ಬನನ್ನು ಕರೆಸಿ ಗಾಳದ ತುದಿಗೆ ನೊಣ ಕಟ್ಟಿಸಿ ಅದನ್ನು ನುಂಗಿಸಿದರು. ಹೊರಗಡೆಯಿಂದ ಆತ ದಾರವನ್ನ ಎಷ್ಟು ಅಲ್ಲಾಡಿಸಿದರೂ ಒಳಗಿದ್ದ ಕಪ್ಪೆ ನೊಣವನ್ನು ನೋಡಿ, ಮಿಣ ಮಿಣ ಅಂತ ಕಣ್ಣು ಬಿಟ್ಟೆ ತಲ್ಲದೆ, ನಾಲಿಗೆ ನೀಡಲೇ ಇಲ್ಲ.

"ಎಲ್ಲಾದರೂ ಒಂದು ಕಡೆ ತೆಪ್ಪಗೆ ಕೂತಿದ್ದರೆ ಕೂತಿರಲಿ" ಅಂತ ಗೋವಿಂದಯ್ಯನವರು ದೊಡ್ಡ ಮನಸ್ಸುಮಾಡಿ ಆಗಾಗ ಏಳುತ್ತಿದ್ದರು. ಆದರೆ, ಅದು ತೆಪ್ಪಗೆ ಕೂಡುವ ಸ್ವಭಾವದ್ದಲ್ಲ. "ಮಂಡೂಕಂ ಕರೋತಿ ವಾಚಾಲಂ" ಎಂಬ ಭಗವಂತನ ಭರವಸೆಯನ್ನೇ ಭೂಲೋಕಕ್ಕೆ ತಿಳಿಸುವಂತೆ ಅದು ವಾಚಾಮಗೋಚರವಾಗಿ ಉಪನ್ಯಾಸ ಕೊಡಲು ಪ್ರಾರಂಭಿಸುತ್ತಿತ್ತು. ಒಟ-ಒಟ-ಒಟ (ಪೀಠಿಕಾ ಪ್ರಕರಣ) ಒಟ-ಒಟ-ಒಟ (ಪೂರ್ವಾಪಕ್ಷ) ಒಟ-ಒಟ-ಒಟ (ಉತ್ತರ ಪಕ್ಷ), ಅಷ್ಟೆ! ಐದಾರು ನಿಮಿಷಗಳಲ್ಲಿ ಅದೇ ಉಪನ್ಯಾಸ. ಪುನರುಕ್ತ್ಯಲಂಕಾರ. ಹೇಳಿದ್ದನ್ನೆ ಹೇಳೊ ಕೆರೆವಾಸಿದಾಸ! ಶಾಲೆಯಲ್ಲಿ ಗೋವಿಂದಯ್ಯನವರು ಪಾಠ ಹೇಳುತ್ತಿರುವಾಗ ನಡುವೆ ಅಕಸ್ಮಾತ್ತಾಗಿ ಒಟ-ಒಟ-ಒಟ ಶಬ್ಧ ಕೇಳಿ ಬಂದರೆ, ಹುಡುಗರೆಲ್ಲರೂ ಲೇವಡಿಗೆ ಲಗಾಮು ಸಡಲಿಸಿ, "ಸಾರ್! ಕಪ್ಪೆ ಸಾರ್!" ಎಂದು ರಂಪ ಎಬ್ಬಿಸುವರು. "ಎಲ್ಲಿ?" ಎಂದು ಕೇಳುವ ಕೆಚ್ಚು ಮೇಷ್ಟರಿಗೆಲ್ಲಿಂದ ಬರಬೇಕು? ದೇವಸ್ಥಾನಕ್ಕೆ ಅಮಿಲ್ದಾರ್ ಸಾಹೇಬರು ದಯಮಾಡಿಸಿದ್ದಾಗ ಪುರಪ್ರಮುಖರ ಸಂಗಡ ಗೋವಿಂದಯ್ಯನವರೂ ಹಾಜರಿರಬೇಕಾಯಿತು. ಮಹಾಮಂಗಳಾರತಿ ತಟ್ಟೆಯನ್ನ ಅಮಿಲ್ದಾರರೆದುರಿಗೆ ಅರ್ಚಕರು ಹಿಡಿದಿದಾರೆ; ಸಾಹೇಬರು ಎರಡಾಣೆ ನಾಣ್ಯ ಹುಡುಕುತ್ತಿದಾರೆ; ನಾಲ್ಕಾಣೆಗಿಂತ ಕಡಿಮೆ ಚಿಲ್ಲರೆ ಕೈಗೆ ಸಿಕ್ಕುತ್ತಾಯಿಲ್ಲ. ಆಗ ಹಾಳು ಕಪ್ಪೆ "ಒಟ-ಒಟ-ಒಟ" ಅಂತ ಅರಚಿಕೊಂಡಿತಲ್ಲಾ! ಏನು ಹೇಳೋಣ; ಆಗಿನ ಅವಾಂತರವನ್ನ! ಎತ್ತಿದ ಪಾವಲಿಯನ್ನ ಅಮಿಲ್ದಾರರು ಕಿಸೆ ಒಳಗೇನೇ ಇಟ್ಟುಬಿಟ್ಟು, ಅರ್ಚಕರನ್ನ ಯದ್ವಾತದ್ವಾ ಬೈದು, ಅಭಿಷೇಕದ ನೀರಲ್ಲಿ ಕಪ್ಪೆ ತಂದಿದೀರಿ ಗರ್ಭಗುಡಿಯೊಳಕ್ಕೆ ಅಂತ ಮೂರು ರೂಪಾಯಿ ಜುಲ್ಮಾನೆ ಹಾಕಿದರು. ಸದ್ಯಕ್ಕೆ, ಅರ್ಚಕರು ಬುದ್ಧಿವಂತರಾಗಿರುವ ಹೊತ್ತಿಗೆ ಬಚಾವಾದರು. "ಸ್ವಾಮಿ! ಕಪ್ಪೆ ಶಬ್ದ ಹೇಗೆ ಬಂತು ಗರ್ಭಗುಡಿ ಹತ್ತಿರ ಅಂತ ತಾವು ವಿಮರ್ಶೆ ಮಾಡಬೇಡಿ. ಈ ದೇವಸ್ಥಾನದಲ್ಲಿ ಇದೊಂದು ಶಿವಲೀಲೆ. ಕಾಳಿಂಗ ಸರ್ಪವೊಂದು ದಿನವೂ ಬಂದು ಕಪ್ಪೆಗೆ ನೆರಳುಕೊಡುತ್ತಾ ಅದರ ಮೇಲೆ ಹೆಡೆ ಎತ್ತಿ ಆಡುತ್ತಿದೆ. ಈ ಮಹಿಮೆಯನ್ನ ತಾವು ನೋಡಬೇಕೆಂದು ಬಯಸಬಾರದು ... .ಕಣ್ಣು ಕುರುಡಾಗುತ್ತದೆ ಅಂತ ಕಣ್ವ ಮಹರ್ಷಿಗಳು ಹೇಳಿದಾರೆ, ಸರ್ಪಶಾಸ್ತ್ರದಲ್ಲಿ!" ಅಂದರು. ಆಗ, ಗೋವಿಂದಯ್ಯನವರ ಸ್ನೇಹಿತರು "ಒಟ

-ಒಟ-ಒಟ" ಅಂದರು. ಅಮಿಾಲ್ದಾರರು ಛಂಗ್ ಅಂತ ನೆಗೆದು ಗೋಪುರ ದಾಚೆಗೆ ಓಡಿದರು.

ಮೊನ್ನೆ ಯಾರೋ ಒಬ್ಬರು ಒಂದು ಉಪಾಯ ಹೇಳಿದರಂತೆ. ಹೊಟ್ಟೆ ತುಂಬ ನೀರು ಕುಡಿದು, ಇಳೀ ಛಾವಿ ಯೊಳಕ್ಕಿಳಿದು ಮುಳುಗಿ ಬಾಯಿ ತೆರೆಯಲಿ—ಎಂದು ಹೇಳಿದರಂತೆ. ಹಾಗೆ ಮಾಡಿದಾಗ, ಒಳಗಿಂದ "ಗೊಳಕ್" ಅಂತ ಯಾವುದೋ ಹೊರಕ್ಕೆ ಹೋಯಿತಂತೆ. ಮಹರ್ಷಿಗಳು ನೀರುಪಾಲಾಗಿರಬೇಕಂತೆ.

ಈಗ ಶಾಂತವಾಗಿದಾರೆ; ಗೋವಿಂದಯ್ಯನವರು!

—ನಾ. ಕ.

ಔಳಿ - ಜೌಳಿ

ಮೊನ್ನೆ ನಾನು ಮೈಸೂರಿಗೆ ಹೊರಟಾಗ ನಡೆದ ಒಂದು ಸೋಜಿಗವನ್ನು ನೆನೆದರೆ ನನಗೆ ಮೈ ಜುಂ ಎನ್ನುತ್ತದೆ. ಅಂದಮೇಲೆ, ಅದನ್ನು ಕೇಳುವಾಗ ನಿಮ್ಮ ಪಾಡು ಏನು ಎಂದು ಪರಮೇಶ್ವರನೇ ಬಲ್ಲ. ಇನ್ನೇನೂ ಇಲ್ಲ. ಎಲೆ ಅಡಿಕೆ ಹಾಕಿಕೊಂಡು ಹೋಲ್ಡಾಲನ್ನು ಕೈಯ್ಯಲ್ಲಿ ಹಿಡಿದು ಹೊಸಲು ದಾಟಿ ಹೊರಗೆ ಬಂದೆ; ಮನೆ ಮುಂದೆ ಕಾದು ಕುಳಿತಿದ್ದ ಇಬ್ಬರು ನನ್ನ ಸಂಗಡಲೇ ಹೊರಟರು, ನಕ್ಷತ್ರಿಕರ ಹಾಗೆ! ನನ್ನ ಆಶ್ಚರ್ಯ ಕೋಪಕ್ಕೆ ತಿರುಗಿತು ಆದರೂ ಅವರು ಬಿಡಲಿಲ್ಲ. ನಾನು ಬಿರಬಿರನೆ ನಡೆದರೆ ಅವರೂ ಬಿರುಬಿರಿಸುವರು! ನಾನು ಮೆಲು ಮೆಲನೆ ನಡೆದರೆ ಅವರದೂ ಮೆಲು ಮೆಲು! ನಾನು ಬಳಸಿದರೆ ಅವರೂ ಬಳಸುವರು! ನಾನು ನಿಂತರೆ, ಅವರಿಬ್ಬರೂ ಪಕ್ಕ ಪಕ್ಕದಲ್ಲೇ ನನ್ನ ಹತ್ತಿರವೇ ನಿಲ್ಲುವರು ನಾನು ಪಾದ ಬೆಳೆಸಿದರೆ, ಅವರೂ ಸಿದ್ಧ! ರೈಲು ಸ್ಟೇಷನ್ನೊಳಕ್ಕೂ ಅವರು ನಿರ್ಭಯವಾಗಿ ನುಗ್ಗಿದರು ಯಾರೂ ಅವರನ್ನು ಟಿಕೆಟ್ ಕೇಳಲೇ ಇಲ್ಲ. ಹೇಗೋ ಏನೋ ನುಸುಳಿಕೊಂಡು ಅವರು ನನ್ನ ಜೊತೆಯಲ್ಲೇ ಪಟಪಟನೆ ಮೆಟ್ಟಿಲುಗಳನ್ನು ಹತ್ತಿ ಇಳಕ್ಕಿಳಿದರು. ಒಬ್ಬರಂತೆಯೇ ಮತ್ತೊಬ್ಬರು! ಒಬ್ಬರ ಹಿಂದೊಬ್ಬರು! ಅವುಳಿ ಜವುಳಿಯೋ ಏನೋ? ನನಗೆ ಅಸಹ್ಯವಾಯಿತು. ಒಬ್ಬರನ್ನು ಹಿಡಿದು ನಿಲ್ಲಿಸಿ ಬೈದೆ; ಮತ್ತೊಬ್ಬರು ನನ್ನ ಕಾಲನ್ನು ಚುಚ್ಚಿದರು. ಅಲ್ಲೇ ಬಿದ್ದಿದ್ದ ಕಲ್ಲು ತೆಗೆದು ಒಬ್ಬರ ಮೇಲೆ ಗುರಿಯಿಟ್ಟು ಎಸೆದೆ. ಕಡೆಗೆ ರೈಲು ಹಬ್ಬಿ

ಯೊಳಕ್ಕೆ ಧಾವಿಸಿದೆ. ಗ್ರಹಚಾರಕ್ಕೆ ಸರಿಯಾಗಿ ಅವರೂ ಧಾವಿಸಿಬಿಟ್ಟರು. ಆ ಡಬ್ಬಿಯಲ್ಲಿ ಜನರು ಆಗಲೇ ಕಿಕ್ಕಿರಿದು ನೆರೆದಿದ್ದರು. ಆದ್ದರಿಂದ ಅವರಿಬ್ಬರೂ ಬೆಂಚಿನ ಕೆಳಗಿನ ಕತ್ತಲಲ್ಲೇ ಮರೆಯಾಗಿ ಮಾತನಾಡದೆ ಮಲಗಿ ನಿದ್ದೆ ಹೋದರು. ಕ್ಲೋಸ್‌ಪೇಟೆ, ಚೆನ್ನಪಟ್ಟಣಗಳಲ್ಲಿ ಜನರು ಇಳಿದು ಹತ್ತಿದಾಗ ನನಗೆ ಅವರ ನೆನಪೇ ಅಳಿದು ಹೋಯಿತು. ಮದ್ದೂರಿಗೆ ಮೂರು ಮೈಲಿ ಇದೆ ಎನ್ನುವಾಗ ನಾನು ಒಂದು ಸಲ ಎಲ್ಲೋ ಜ್ಞಾನದಲ್ಲಿ ಬಲಗಾಲನ್ನು ಕೆಳಕ್ಕಿಳಿಸಿದೆ. ಆಗ ಅದು ಅವರಲ್ಲೊಬ್ಬರ ಮೈ ಮೇಲೆ (ಅವರೇ ಅವರ ಪೈಕಿ ಎಡಚರು) ತಾಕಿತು. ಮಲಗಿದ್ದವರು ಹಾಗೆಯೇ ಮಗುಚಿಕೊಂಡರಾದರೂ, ಎಚ್ಚರವಾಗಲಿಲ್ಲವೆಂದು ತೋರಿತು. ಅಲುಗಾಡದೆ ಜಡವಾಗಿ ಬಿದ್ದಿದ್ದರು. ಅವರ ಕಡೆಗೆ ಒಂದು ಶಾಪವನ್ನೆಸೆದು ನಾನು ಬೆಂಚಿನ ಮೇಲೇನೆ ಕಾಲುಗಳೆರಡನ್ನೂ ನೀಡಿ ಕುಳಿತೆ. ಮೈಸೂರು ಸ್ಟೇಷನ್ನಲ್ಲಿ ನಾನಿಳಿದಾಗ ಅವರಿಬ್ಬರೂ ನನ್ನ ಕಾಲು ಹಿಡಿದು ನನ್ನ ಜೊತೆಯಲ್ಲೇ ಬರುತ್ತೇವೆಂದು ಹಠ ಹಿಡಿದರು. ನಿರ್ವಾಹವಿಲ್ಲದೆ, ಮನಸ್ಸಿಲ್ಲದ ಮನಸ್ಸಿನಿಂದ, ಕರೆದು ತಂದೆ. ದಾರಿಯುದ್ದಕ್ಕೂ ಮಳೆ. ನನ್ನ ಹತ್ತಿರವಿದ್ದದ್ದು ಒಂದೇ ಒಂದು ಛತ್ರಿ ಅವರಿಬ್ಬರೂ ಪೂರ ನೆನೆದು ಒದ್ದೆಯ ಮುದ್ದೆಯಾದರು. ಈಗ ಅವರು ನನ್ನ ಮನೆ ಜಗುಲಿ ಮೂಲೆಯಲ್ಲಿ ನಡುಗುತ್ತ ಕೂತಿವೆ. ಕೊಳೆ; ಕೆಸರು. ಒಳಗೆ ತರೋಣವೆಂದರೆ, ನಮ್ಮಮ್ಮ "ಥೂ! ಹಾಳು ಎಕ್ಕಡ ಒಳಕ್ಕೆ ತರಬೇಡ" ಅಂತಾರೆ.

—ನಾ. ಕ.

———o———

"ಒಂದು ಹೆಗ್ಗಣದ ಕಳೇಬರಹವನ್ನು ಸಾಗಿಸಿದ್ದಾಯಿತು" ವೃತ್ತಪತ್ರಿಕೆ. ದವಸ ಧಾನ್ಯದ ದಾಸ್ತಾನು ವಿಷಯದ ಆಜ್ಞೆ ಬರುತ್ತಲೂ ಒಂದು ಹೆಗ್ಗಣವಾದರೂ ಕಡಿಮೆ ಆಯಿತಲ್ಲ!

*   *

"ಎಷ್ಟು ವಯಸ್ಸಾದರೂ ಚಿಂತೆಯಿಲ್ಲ, ನಾವು ಸಂಗೀತ ಕಲಿಯಬಹುದು"
(ಉಪನ್ಯಾಸಕರು)

ನಮಗೆ ಪರಿಚಿತರಾದ ಅನೇಕ ಸಂಗೀತಗಾರರು ಈ ಮಾತಿನ ಭರವಸೆಯ ಮೇಲೆಯೇ ತಮ್ಮ ಸಂಗೀತಾಭ್ಯಾಸವನ್ನು ತಳ್ಳಿಹಾಕುತ್ತಿರುವರು.

*   *

ಪರೀಕ್ಷೆಯ ಸಮಯ

(ಶ್ರೀ 'ವಿ. ಸೀ'ಯವರ ಕ್ಷಮೆ ಬೇಡಿ)

ಸತ್ವವನು ಪರಿಕಿಸುವ ಸಮಯ ಬಂದಿಹುದು
ಬಲ ಕುಶಲ ಸಾಹಸಿಗಳಿಹುವೆ ನೋಡು ||

ಪಾವಕ್ಕಿ ಅನ್ನದಲ್ಲಿ ಜೀವಿಸಿರಬಲ್ಯಾ?
ಆವಗಂ ಅಂಗಡಿಗೆ ಸುತ್ತಬಲ್ಯಾ?
ಅಕ್ಕಿ ಸ್ಟಾಕ್ ಇಟ್ಟವರ ಸಹಿಸಬಲ್ಯಾ?
ಸಕ್ಕರಿಲ್ಲದ ಕಾಫಿ ಕುಡಿಯಬಲ್ಯಾ || ೧ ||

ಅಳುವ ಮಕ್ಕಳ ಕಾಟ ತಡೆಯಬಲ್ಯಾ?
ಕೇಳದವರನು ಹೊಡೆದು ಅಟ್ಟಬಲ್ಯಾ?
ಹಬ್ಬ ಹರಿದಿನಗಳನು ಮಾಡಬಲ್ಯಾ?
ಹಬ್ಬದಲಿ ನೀರ್ಕುಡಿದು ಬದುಕಬಲ್ಯಾ? || ೨ ||

ಚಿಲ್ಲರಿಲ್ಲದೆ ಹೋಟಲ್ ಹೊಕ್ಕಿ ಬರಬಲ್ಯಾ?
ಅಲ್ಲಿ ಬೆಲ್ಲದ ಕಾಫಿ ಕುಡಿಯಬಲ್ಯಾ?
ದುಡ್ಡನೀಯದೆ ಹೊರಗೆ ನುಗ್ಗಿಬರಬಲ್ಯಾ?
ಫುಡ್ಡು ಕಂಟ್ರೋಲರನು ಕೆಣಕಬಲ್ಯಾ? || ೩ ||

ಸಿಡುಕು ಅಧಿಕಾರಿಯನು ಬೈಯ್ಯಬಲ್ಯಾ?
ಕಾಡುವಾ ಭಿಕ್ಷುಕರ ತಡೆಯಬಲ್ಯಾ?
ರೇಷನ್ ಕಾರ್ಡಿಲ್ಲದೇ ಅಕ್ಕಿ ತರಬಲ್ಯಾ?
ಸೀಸೆ ಸೀಮೇಯೆಣ್ಣೆ ಚೆಲ್ಲಬಲ್ಯಾ? || ೪ ||

ಬಾಡಿದಾ ಮುಖದಿಂದ ನಗಲುಬಲ್ಯಾ?
ಬ್ಲೇಡಿಲ್ಲದೇ ಗಡ್ಡ ಷೇವಬಲ್ಯಾ?
ಗಡ್ಡಮೀಸೆಗಳೆಲ್ಲ ಬೆಳೆದು ನಿಂತಿದ್ದಾಗ
ಬಿಡದೆ ಪತ್ನಿಯ ನಗುವ ಸಹಿಸಬಲ್ಯಾ? || ೫ ||

—ಕುಸುಮ.



" ಈ ಸ್ನೋ ಹಾಕಿದರೆ ಚರ್ಮ ಮೃದುವಾಗಿ, ನುಣುಪಾಗಿ, ಅಂದವಾಗಿ ಆಗುತ್ತೆ ಅಂತ ಪೇಪರಿನಲ್ಲಿ ಓದಿದ್ದೆ............"

ಬೆಂಕಿಪೊಟ್ಟಣ

"ಬೆಂಕಿ ಬಿದ್ದುಹೋಗಲಿ!" ಎಂದು ಶಪಿಸುವಾಗಿನ ಅನಾಯಾಸದಿಂದ, ದಿನಕ್ಕೆ ಅಷ್ಟೇ ಸಲ, ನಾನು ಹಿಂದೆ, ನಾಲ್ಕು ವರ್ಷದ ಹಿಂದೆ, ಕಾಲೇಜಿನಲ್ಲಿದ್ದಾಗ, "ಬೆಂಕಿಕಡ್ಡಿ ಬಿದ್ದುಹೋಗಲಿ" ಎಂದು ಶಪಿಸುತ್ತಿದ್ದೆ. ಬಿದ್ದುಹೋದರೆ, ಸುಮ್ಮನಿರುತ್ತಿದ್ದೆ. ಹಚ್ಚಿದ ಕಡ್ಡಿ ಗಾಳಿಗೆ ಆರಿಹೋಯಿತೆಂದರೆ, ಹೋಗಗೊಡುತ್ತಿದ್ದೆ. ಪೆಟ್ಟಿಗೆಯಿಂದ ಹೊರಕ್ಕೆಳೆಯುವ ರಭಸದಲ್ಲಿ ನೆಲಕ್ಕೆ ಬಿತ್ತೆ,...ಬೀಳಲಿ ಎಂದು ಸುಮ್ಮನಿರುತ್ತಿದ್ದೆ. ಶರೀರಾರ್ಧವನ್ನು ಬಗ್ಗಿಸಿ ಕೈನೀಡಿ ತಡಕಾಡುತ್ತಿರಲಿಲ್ಲ. ಗೀಚಿದ ಕಡ್ಡಿ ಉರಿಯತೊಡಗಿದ ಮೇಲೂ ಕೂಡ ಮಾತಿನ ಮಳೆಯಲ್ಲೋ ಅನುಮಾನದ ಆಂದೋಳನದಲ್ಲೋ, ಮರವೆಯ ಮಾಹಾತ್ಮ್ಯದಿಂದಲೋ ಅನೇಕ ವೇಳೆ ನಂದಿಹೋಗುತ್ತಿತ್ತು. ಆಗ, ಅಂತರಂಗವನ್ನು ಹದಗೆಡಿಸದೆ, ಮತ್ತೊಂದರಿಂದಲೋ, ಮಗುದೊಂದರಿಂದಲೋ, ಮೂರನೆಯದರಿಂದಲೋ ಬಾಯಿಗೆ ಹೊಗೆ ಹಿಡಿಸಿದ್ದುಂಟು!" ಕಡ್ಡಿ ಪೈಲ್ವಾನ್ ಅಂತ ಹೆಸರಿದೆಯಲ್ಲಾ ನಿನಗೆ? ಈ ಬಟ್ಟಬಯಲಿನಲ್ಲಿ ಸಿಗರೇಟ್ ಹೊತ್ತಿಸುವುದಕ್ಕೆ ಎಷ್ಟು ಕಡ್ಡಿ ಗೀಚುತ್ತೀಯೋ ಅಷ್ಟು ಕಪ್ ಕಾಫಿ ಕುಡಿಸು ನನಗೆ, ನಿನಗೆ ಛಾತಿ ಇದ್ದರೆ" ಎಂದು ಮುರಿಗ ಮೂದಲಿಸಿದಾಗಲೆಲ್ಲ ನಾನು ಹಿಂಜರಿಯದೆ ಪಂಥಕ್ಕಿಳಿದು ಸೋತು ರೂಪಾಯಿ ರೂಪಾಯಿ ತೆತ್ತು ಉಪ್ಪೋಪಚಾರ ಮಾಡಿದ್ದುಂಟು! ನಮ್ಮ ಹಾಸ್ಟೆಲಲ್ಲಿದ್ದ ಎಂಬತ್ತೆರಡು ವಿದ್ಯಾರ್ಥಿಗಳ ಪೈಕಿ ಬಾಯಿ ಬ್ರಹ್ಮಚಾರಿಗಳು ಹಲವರನ್ನು ಬಿಟ್ಟರೆ, ಮಿಕ್ಕೆಲ್ಲ ಹೊಗೆಗಾರರಿಗೂ ಲೀಲಾಜಾಲವಾಗಿ ಕಡ್ಡಿಯನ್ನು ದಾನಮಾಡುತ್ತಿದ್ದ ಕಾಲ ಅದು! ದಿನವೊಂದಕ್ಕೆರಡು ಪೆಟ್ಟಿಗೆ—ಏಕೆ, ಎಂಟು ಪೆಟ್ಟಿಗೆಗಳನ್ನೂ ಚೆಲ್ಲಿ ಚದುರಿಸಿ ಉರಿಸಿ ಹಾರಿಸಿ ಹಾಳುಮಾಡಿದ ಕಾಲ ಅದು.

ಆಗಿನ ಅಗ್ನಿಪೂಜಕರ ಧೋರಣೆಯೇ ಧೋರಣೆ. ಅಕಸ್ಮಾತ್ ನಮ್ಮ ಕಿಸೆಯಲ್ಲಿ ಪೆಟ್ಟಿಗೆ ಇಲ್ಲದೆ ಹೋದರೂ, ಲೋಕವೇನೂ ತಲೆಕೆಳಕಾಗುತ್ತಿರಲಿಲ್ಲ. ಎದುರಿಗೆ ಸಿಕ್ಕಿದ ಯಾವ ಸಿಗರೇಟ್ ತುಟಿಯವನನ್ನಾದರೂ ಧೈರ್ಯವಾಗಿ ಕೇಳಬಹುದು; "ರೀ! ಬೆಂಕಿಪೆಟ್ಟಿಗೆ ಕೊಡಿ" ಅಂತ. ಬೀಡಿ ಸೇವಕರೂ ಕೂಡ ಬಿಚ್ಚಿದ ಕೈಯಿಂದ ಅಗ್ನಿದಾನ ಮಾಡುತ್ತಿದ್ದ ಸುವರ್ಣಯುಗ ಅದು........

ಈಗ ನಾನು ಕಾಲೇಜು ಹಾಸ್ಟಲಲ್ಲಿಲ್ಲ. ಸೆಕ್ರಟೇರಿಯಟ್ಟಿನಲ್ಲಿ ಗುಮಾಸ್ತೆಯಾಗಿದೇನೆ!—ಯಾವುದೋ "ಸುಡುಗಾಡು" ಸೆಕ್ಷನ್! ಅಂದರೆ, ಸಾಕ್ಷಾತ್, ಸುಡುಗಾಡೇ! (ಯಾಕೆ? ಅದರ ಸಂಸ್ಥಾಪನೆ, ವ್ಯವಸ್ಥೆ, ವರ್ಗಾವರ್ಗಿ, ಸ್ಥಾನಮಾನಗಳ ಇತ್ಯರ್ಥ, ಊರಿಗೂ ಅದಕ್ಕೂ ಇರಬೇಕಾದ ಸಾಮೀಪ್ಯ, ಮೆರವಣಿಗೆಗಳ ಮಾರ್ಗ, ಶಂಖವಾದ್ಯದ ವ್ಯವಹಾರಗಳು, ಇಂಧನದ ಪೂರೈಕೆ ಮುಂತಾದವುಗಳಿಗೆಲ್ಲ ಒಂದು ಸೆಕ್ಷನ್ ಬೇಡವೇನು?) ಅಲ್ಲದೆ, ಯುದ್ಧ ಬೇರೆ! ಆಹಾರ ಪದಾ

ರ್ಥಗಳ ಅಭಾವ. ಅಂಥಾದ್ದರಲ್ಲಿ, ಹೊಟ್ಟೆಗಿಷ್ಟು ಹೊಗೆಯನ್ನಾದರೂ ತುಂಬಿಕೊಳ್ಳೋಣ ಎಂದರೆ, ಧೂಮ ಪಾನಕ್ಕೂ ಧೂಮಕೇತು ಬಡಿಯಿತು. ಬೆಂಕಿ ಕಡ್ಡಿಗೂ ಬೆಂಕಿಬಿತ್ತು. ಯಾವ ಅಂಗಡಿಗೆ ಹೋದರೂ, "ಸಕ್ಕರೆ ಇಲ್ಲ, ಚಿಲ್ಲರೆ ಇಲ್ಲ, ಸಾಹುಕಾರರು ಊರಲ್ಲಿಲ್ಲ, ಬೆಂಕಿಪೊಟ್ಟಣ ಇಲ್ಲ"! ಎಂಬ ಬೋರ್ಡು ಗಳು! ಬಾಯಿಗೆ ಹಾಕಿಕೊಳ್ಳೋಣ ಅಂದರೆ, ಎರಡು ಅಕ್ಕಿಕಾಳಿಲ್ಲ!!

ಕಿಸೆಯಲ್ಲೊಂದು ಸಿಗರೇಟಿದ್ದರೂ ಕೂಡ, ಈಗ ನೇರವಾಗಿ ಯಾರನ್ನೂ, "ರೀ! ಬೆಂಕಿ ಪೆಟ್ಟಿಗೆ" ಎಂದು ಹಲ್ಲು ಕಿರಿದು ಕೇಳುವ ಹಾಗಿಲ್ಲ. ಈಗ ನಾವು ಹೆಚ್ಚು ಜಾಗರೂಕತೆಯಿಂದ, ಮೈಯೆಲ್ಲ ಕಣ್ಣಾಗಿ, ಯಾರಾದರೂ ಸೇದುಕಡ್ಡಿ ಯನ್ನು ಸೇವಿಸುವವರು ಸಿಕ್ಕರೆ ನಯ ವಿನಯಗಳಿಂದ, ಚಾಣಕ್ಯತನದಿಂದ ಅವರನ್ನು ಅನುಸರಿಸಬೇಕಾಗಿದೆ— ಕೇವಲ ಒಂದು ಕಸ ಕಡ್ಡಿಗಾಗಿ!

ಮೊನ್ನೆ ನನ್ನೆದುರು ರೈಲಲ್ಲೊಬ್ಬರು ಕುಳಿತಿದ್ದರು. ಬೆರಳು ಸಂದಿನಲ್ಲಿ ಹೊಗೆ ಹೆಪ್ಪು ಕಟ್ಟಿದ್ದರಿಂದ ಅವರು ಪುಂಖಾನು ಪುಂಖಿಗಳೆಂದು ನಾನು ನಿಶ್ಚಯಿಸಿದೆ. ಅಂತಹವರ ಹತ್ತಿರ ಕಡ್ಡಿಪೆಟ್ಟಿಗೆಯಿಲ್ಲದೆ ಉಂಟೆ? ನಾನು ನನ್ನ ಕಿಸೆಯೊಳಗೆ ಕೈಯ್ಯನ್ನಿಟ್ಟು, ಅದರ ಅಂತರಾಳದಲ್ಲೇ ಬೆರಳ ಸಂದಿನಲ್ಲಿ ಸಿಗರೇಟನ್ನು ಸಿಕ್ಕಿಸಿ ಹೊರಗೆಳೆಯಲು ಸಿದ್ಧನಾದೆ. ನನ್ನ ಮುಂದೆ ಕಾಲಿನ ಮೇಲೆ ಕಾಲಿರಿಸಿ ಕುಳಿ ತಿದ್ದ ಧೂಮಪಾನಕರು ಕಡ್ಡಿ ಗೀಚಿ ತಮ್ಮ ಬತ್ತಿಯನ್ನು ಹೊತ್ತಿಸಿ ಅದನ್ನು ಊದಿ ಆರಿಸಲು ತಮ್ಮ ತುಟಿಗಳನ್ನು ಓ ಎಂದು ಚಕ್ರಾಕಾರಕ್ಕೆ ಸುತ್ತುವ ಹೊತ್ತಿಗೆ, "ಸ್ವಾಮಿ! ಸ್ವಲ್ಪ" ಅಂತ ಮೂತಿ ನೀಡಿ ಸಿಗರೇಟು ತೋರಿಸಿ, ಅದೇ ಕಡ್ಡಿ ಯಿಂದ ಆತನ ಕೈಯಿಂದಲೇ ಅಗ್ನಿ ಪ್ರದಾನಮಾಡಿಸುವುದು ಎಂದು ಸಂಕಲ್ಪ ಮಾಡಿದೆ. ನಾನು ನಿರೀಕ್ಷಿಸಿದಂತೆ ಅವರು ತಮ್ಮ ಜೇಬಿಗೆ ಕೈಹಾಕಿ ಸಿಗರೇಟನ್ನು ಬಾಯಿಗಿಟ್ಟು ಕಚ್ಚಿ ನಿಲ್ಲಿಸಿದರು. ಮತ್ತೊಮ್ಮೆ ಅದೇ ಕೈ ಅದೇ ಜೇಬಿಗೆ ಹೋಯಿತು. ನಾನು "ಪರಮಾತ್ಮಾ" ಅಂದುಕೊಂಡೆ. ಆದರೆ, ಆತನ ಕೈ ಮತ್ತೆ ಹೊರಕ್ಕೆ ಬರಲೇ ಇಲ್ಲ. ಅರ್ಥ ಗಂಟೆ ಆಯಿತು. ಎಡತೊರೆಯಿಂದ ರೈಲು (ಈಗಿನ ರೈಲು) ಹಾಸನಕ್ಕೂ ಬಂತು. ನನ್ನ ಕೈ ಯಾವಾಗ ನನ್ನ ಕಿಸೆಯೊಳಕ್ಕೆ ಹೋಗಿ ಅಲ್ಲಿಂದ ಬೆಂಕಿ ಪೊಟ್ಟಣವನ್ನು ಹೊರಕ್ಕೆ ತರುತ್ತದೋ ಎಂದು ಅವರೂ ಎದುರು ನೋಡು ತ್ತಿದ್ದರೋ ಏನೋ, ಎಂದು ನನಗೆ ದುಡ್ಡದಲ್ಲಿ ಹೊಳೆಯಿತು! ನನ್ನ ಕಣ್ಣಲ್ಲಿ ನೀರು ಬಂತು! ಅವರು ನಿಟ್ಟುಸಿರು ಬಿಟ್ಟರು! ನಾನೂ ಒಂದು ನಿಟ್ಟುಸಿರು ಬಿಟ್ಟೆ! ಆಗ ಅವರ ಕಣ್ಣಲ್ಲೂ ನೀರು ಬಂತು. "ನಿಮಗೂ ಅದೇ ಸಂಕ ಟವೋ?" ಅಂದರು. ಅವರ ಬಾಯಿಂದ ಇಡೀ ಸಿಗರೇಟು ಕಳಚಿಬಿತ್ತು. ಒಳ ಗಿಂದ ಉಕ್ಕಿ ಬಂದ ಸಹತಾಪದಲ್ಲಿ ನಾನು ನನ್ನ ಜೇಬಿಂದ ಸಿಗರೇಟನ್ನು ಸರಕ್ಕನೆ ಹೊರಗೆಳೆದು ಕೆಳಕ್ಕೆಸೆದು ಬೂಟ್ಸು ಕಾಲಿಂದ ತುಳಿದೆ—ಬಾಗೇಶ ಪುರದಲ್ಲಿ.

—ಪಿ. ಗುರುವಣ್ಣ.

—o—

ಕ್ಷಮಾಪಣೆ ಪತ್ರ

ಮಾನ್ಯ ಅಧಿಕಾರಿಗಳಾದ "...... ...." "........" ಇತ್ಯಾದಿ ಇತ್ಯಾದಿ ಅನೇಕ ಬಿರುದಾಂಕಿತರಾದ, ಸಕಲ ಕಷ್ಟನಿಷ್ಠೂರಗಳನ್ನೂ ಅರಿತಿರುವ "........" ಆಫೀಸ ರವರಲ್ಲಿ, ಬಡಗುಮಾಸ್ತೆ ....ಪ್ಪನು ಬರೆದುಕೊಂಡ ಅಹವಾಲು ಏನೆಂದರೆ:—

ಮಹಾಸ್ವಾಮಿ,

ಮೊನ್ನೆ—ವಾರದ ದಿನ ತಾವು ನಮ್ಮ ಕಛೇರಿಗೆ ದಯಮಾಡಿಸಿದ್ದ ವೇಳೆಯಲ್ಲಿ ನಾವೊಬ್ಬರೂ ಯಾಕೆ ಹಾಜರಿರಲಿಲ್ಲವೆಂಬ ವಿಷಯದಲ್ಲಿ ಸಮರ್ಪಕವಾದ ವಿವರಣೆ ಕೊಡಬೇಕೆಂಬುದಾಗಿಯೂ, ತಪ್ಪಿದರೆ ಸಂಬಳ ಖೋತಾ ಮಾಡುವುದಲ್ಲದೆ, ಕೆಲಸ ದಿಂದಲೇ ವಜಾ ಕೂಡ ಆಗಬಹುದೆಂಬ ಎಚ್ಚರಿಕೆಯನ್ನು ಕೊಟ್ಟಿರುವಿರಷ್ಟೆ. ನಮಗೆ ತಾಯಿ ತಂದೆಗಳೋಪಾದಿಯಲ್ಲಿರುವ ತಮ್ಮಲ್ಲಿ ಯಾವ ವಿಚಾರವನ್ನು ತಾನೇ ಮರೆಮಾಚಲು ಸಾಧ್ಯ? ಇದ್ದುದನ್ನು ಅರಿಕೆ ಮಾಡಿಕೊಳ್ಳುತ್ತೇನೆ, ಮಹಾಸ್ವಾಮಿ.

೧. ತಾವು ಈ ರೀತಿಯಲ್ಲಿ ಒಬ್ಬರಿಗೂ ಮೊದಲೇ ತಿಳಿಯಪಡಿಸದೆ ೧೧॥ ಘಂಟೆಗೇ ಕಛೇರಿಗೆ ದಯಮಾಡಿಸುವಿರೆಂದು ಯಾರು ತಾನೆ ಕನಸು ಕಂಡಿದ್ದರು? ಸಾಧಾರಣವಾಗಿ ಎರಡೂವರೆ ಘಂಟೆ, ಮೂರು ಘಂಟೆ ವೇಳೆಗೆ ತಮ್ಮ ಘನ ಸವಾರಿಯು ಚಿತ್ತೈಸುವುದು ಲೋಕವಿದಿತವಾಗಿದೆ. ಯಾವ ದೊಡ್ಡ ಆಫೀಸರು ತಾನೆ ಅದಕ್ಕಿಂತ ಮೊದಲು ಬರಲು ಸಾಧ್ಯ? ಬರೀ ನೂರು ರೂಪಾಯಿಗಳ ಅಧಿ ಕಾರಿಗಳಂತೆ ತಾವು ಒಂದೂವರೆ, ಎರಡು ಘಂಟೆ ವೇಳೆಗೇ ಬರುವುದು ಸಾಧ್ಯವೂ ಅಲ್ಲ, ಸೂಕ್ತವೂ ಅಲ್ಲ ಎಂಬುದು ಲೌಕಿಕವಾದ ವಿಚಾರ. ಆದರೆ, ತಾವು ಹೀಗೆ ಮಾಮೂಲು ತಪ್ಪಿ ಬೆಳಿಗ್ಗೆ ಎದ್ದವೊಡನೆ ೧೧॥ ಘಂಟೆಗೇ ಬರುವುದನ್ನು ಲಿಖಿತ ಮೂಲಕವಾಗಿಯಾಗಲಿ, ಟೆಲಿಫೋನಿನ ಮುಖಾಂತರವಾಗಿಯಾಗಲೀ ತಿಳಿಯಪಡಿ ಸಿದ್ದರೆ ನಾವೆಲ್ಲಾ ಜವಾನರೊಂದಿಗೆ ಬೇಗಲೇ ಹಾಜರಾಗುತ್ತಿದ್ದೆವು. ಮತ್ತು ಕಛೇರಿಯೆಲ್ಲವನ್ನೂ ಶುಚಿಯಾಗಿಡುವುದಲ್ಲದೆ ತಮಗಾಗಿ ನಮ್ಮ ಸಾಹೇಬರ ಮೇಜನ್ನು ಸಹ ಒಂದು ರೀತಿಯ ಚೊಕ್ಕಟಸ್ಥಿತಿಗೆ ಖಂಡಿತವಾಗಿಯೂ ತಂದಿಡು ತ್ತಿದ್ದೆವು.

೨. ತಮ್ಮ ಅನಿರೀಕ್ಷಿತ ಭೇಟಿಯಿಂದ ನಮಗೆಲ್ಲಾ ಮನಸ್ಸಿಗೆ ತುಂಬಾ ಕೊರತೆಯುಂಟಾಗಿದೆಯೆಂದು ಅರಿಕೆ ಮಾಡಿಕೊಳ್ಳಬೇಕಾಗಿದೆ, ಮಹಾಸ್ವಾಮಿ. ತಾವು ನಮ್ಮ ಮೇಲೆ ಕೃಪೆಯಿಟ್ಟು ನಮ್ಮ ಕಛೇರಿಗೆ ದಯಮಾಡಿಸಿದ ಕಾಲದಲ್ಲಿ ಗುಡಿಸುವವರ ಹೊರತು ನಮ್ಮಲ್ಲಿ ಮತ್ಯಾರೂ ಎದುರುಗೊಳ್ಳುವುದಕ್ಕೆ ಇಲ್ಲದಿದ್ದುದ ರಿಂದ ನಮ್ಮ ಪುರಾತನ ಪದ್ಧತಿ ಪ್ರಕಾರ ಎರಡು ನಿಂಬೇ ಹಣ್ಣು ಮತ್ತು ಒಂದು

ಹೂವಿನ ಹಾರ ಇವುಗಳನ್ನೂ ಸಹ ಅರ್ಪಿಸಲು ಸಾಧ್ಯವಾಗಲಿಲ್ಲವೆಂಬುದು ನಮಗೆ ಆಮರಣಾಂತ ವ್ಯಥೆಯನ್ನುಂಟುಮಾಡುವ ವಿಷಯವಾಗಿದೆ. (ಈ ಯುದ್ಧಕಾಲದಲ್ಲಿ ನಿಂಬೆಹಣ್ಣಿನ ತುಟ್ಟಿಬೆಲೆಯನ್ನು ಸಹ ನಾವು ಲಕ್ಷಿಸುತ್ತಿರಲಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ!). ತಾವು ಹೀಗೆ ಎದುರಿಗೆ ಬರದೆ ಹಿಂದಿನಿಂದ ಕೊಟ್ಟ ಏಟು ಒಂದಕ್ಕೆ ನಾಲ್ಕರಷ್ಟು ನೋವನ್ನುಂಟುಮಾಡಿದೆ ಎಂದು ವಿಷಾದದಿಂದ ಹೇಳಬೇಕಾಗಿದೆ, ಮಹಾಸ್ವಾಮಿ.

೩. ಇನ್ನು ನಾವು ಹೊತ್ತಿಗೆ ಸರಿಯಾಗಿ ಏಕೆ ಬರಲಿಲ್ಲವೆಂಬ ವಿಚಾರ:

ಮೂವತ್ತು ನಲವತ್ತು ರೂಪಾಯಿಗಳು ಸಂಬಳವಿರುವ ಬಡ ಗುಮಾಸ್ತೆಗಳಾದ ನಾವು ಗಡಿಯಾರಗಳನ್ನು ಇಟ್ಟುಕೊಳ್ಳುವುದು ಸಾಧ್ಯವಲ್ಲವೆಂಬ ಚಿಕ್ಕ ವಿಚಾರವು ತಮ್ಮ ಗಮನಕ್ಕೆ ಬಂದಿರಲಾರದೆಂದು ನಂಬುತ್ತೇನೆ. ಮೊದಲೆಲ್ಲಾ ಸೂರ್ಯನ ನೆರಳನ್ನು ನೋಡಿ ನಮ್ಮ ಹೆಂಗಸರು ಕಛೇರಿ ಹೊತ್ತಿಗೆ ನಮ್ಮನ್ನು ಊಟಕ್ಕೆ ಎಬ್ಬಿಸುತ್ತಿದ್ದರು. ಈಗಲಾದರೋ, ಘನ ಸರ್ಕಾರದವರು ಸೂರ್ಯ ಚಂದ್ರರ ಉದಯಾಸ್ತ ಕಾಲದ ವೇಳೆಗಳನ್ನು ಬದಲಾಯಿಸಿರುವುದರಿಂದ ನಮ್ಮ ಮತ್ತು ನಮ್ಮ ಹೆಂಗಸರ ಮನಸ್ಸುಗಳಲ್ಲಿ ಘಂಟೆ ಎಷ್ಟೆಂಬುದರ ಬಗ್ಗೆ ತುಂಬಾ ಅವ್ಯವಸ್ಥೆಯಾಗಿ ಹೋಗಿರುತ್ತೆ. ಹತ್ತಿರದಲ್ಲಿರುವ ಮುನಿಸಿಪಲ್ ಗಡಿಯಾರವೂ ಸಹ ಖಾಯಿಲೆಯಾಗಿಬಿಟ್ಟಿದೆಯಾದ್ದರಿಂದ ವೇಳೆಯನ್ನು ತಿಳಿಯುವುದು ಬಹಳ ಕಷ್ಟವಾಗಿದೆ, ಮಹಾಸ್ವಾಮಿ.

೪. ಅಲ್ಲದೆ, ಆಹಾರ ಪದಾರ್ಥಗಳ ಸರಬರಾಜಿನ ಬಗ್ಗೆ ಘನ ಸರ್ಕಾರದವರು ಮಾಡಿರುವ ಸುವ್ಯವಸ್ಥೆಯಿಂದ ಬಡವರಾದ ನಮಗೂ ಸಹ ಒಂದೊಂದು ಹೊತ್ತಿಗಾಗುವಷ್ಟು ಅಕ್ಕಿ ದಿನವೂ ಸಿಕ್ಕುತ್ತಲಿರುವುದೇನೋ ಸರಿಯೆ. ಆದರೆ, ಈ ಅಕ್ಕಿಯನ್ನು ತರಬೇಕಾದರೆ, ವಾರಕ್ಕೊಂದು ದಿನ ಬೆಳಗಿನಿಂದ ಸಾಯಂಕಾಲದವರೆಗೂ ಅಂಗಡಿ ಬಳಿ ಕಾಯಬೇಕು. ಸೌದೆಗಾಗಿ ಮತ್ತೊಂದು ದಿನ ಕಾಯಬೇಕು. ಸಕ್ಕರೆ ಮುಂತಾದ ಮಿಕ್ಕ ಪದಾರ್ಥಗಳಿಗೆ ಮತ್ತೆರಡು ದಿನಗಳು ಬೇಕು. ಹೀಗಾಗಿ ಅಂತೂ ಈ ಪದಾರ್ಥಗಳ ಶೇಖರಣೆಯಲ್ಲಿ ವಾರಕ್ಕೆ ನಾಲ್ಕು ದಿವಸ ಗೈರುಹಾಜರಾಗಬೇಕಾಗುತ್ತೆ. ಇದು ತಿಳಿದುಬಿಟ್ಟರೆ ಹೊಟ್ಟೆಪಾಡಿಗೇ ಕಲ್ಲು ಬೀಳುವುದೆಂಬ ಭಯದಿಂದ ನಾವು ಗುಮಾಸ್ತೆಗಳೆಲ್ಲರೂ ಒಂದು ಸಂಘ ಮಾಡಿಕೊಂಡು ವಾರಕ್ಕೆ ಒಬ್ಬೊಬ್ಬರು ಒಂದೇ ದಿವಸ ಗೈರುಹಾಜರಾಗುವಂತೆ ಏರ್ಪಾಟು ಮಾಡಿಕೊಂಡಿದ್ದೇವೆ. ಹಾಜರು ಪುಸ್ತಕದಲ್ಲಿ ಈ ವಿಷಯ ತಿಳಿಯುವ ಹಾಗಿಲ್ಲವೆಂಬ ಅಂಶವನ್ನು ಬಾಯಿಬಿಟ್ಟು ಹೇಳಬೇಕಾದುದೇನೂ ಇಲ್ಲ!

ಹೀಗೆ ತಂದ ಸಾಮಾನುಗಳನ್ನು ವಿಂಗಡಿಸಿ, ನಿತ್ಯವೂ ಅವುಗಳಲ್ಲಿರುವ ಕಸ ಕಡ್ಡಿಗಳನ್ನು ತೆಗೆದುಹಾಕಿ ಅಡಿಗೆಗೆ ಸಿದ್ಧಮಾಡಿಕೊಡುವ ವೇಳೆಗೆ (ಈ ಕೆಲಸ ನಾವೇ ಮಾಡಬೇಕಷ್ಟೆ—ದುಡ್ಡುಕೊಟ್ಟು ಮಾಡಿಸುವ ಹಾಗಿಲ್ಲ, ಮನೆಯಾಕೆಗೆ

ಸಾಧ್ಯವಿಲ್ಲ!) ಹನ್ನೊಂದೂ ಆಗುತ್ತೆ, ಹನ್ನೆರಡೂ ಆಗುತ್ತೆ. ಈ ಕೆಲಸದಲ್ಲಿ ಅಭ್ಯಾಸವಾಗುವುದಕ್ಕೇ ಒಂದು ತಿಂಗಳು ಬೇಕಾಯಿತು. ಅಲ್ಲದೆ, ಸರ್ಕಾರಿ ಡಿಪೋವಿನಲ್ಲಿ ಸಿಕ್ಕುವ ಉಂಡು ಸೌದೆಯನ್ನು ತಂದು, ಒಡೆದು ಅಡಿಗೆ ಒಲೆಗೆ ಅಣಿಮಾಡಿ ಕೊಡುವ ವೇಳೆಗೆ ನಾವು ಪಡಬೇಕಾದಷ್ಟು, ಪಾಪ, ತಮ್ಮಂಥ ಪುಣ್ಯವಂತರಿಗೆ ಹೇಗೆ ತಿಳಿಯಬೇಕು? ಈ ಸೌದೆ ಒಡೆಯುವುದರ ಫಲವಾಗಿ ನಿತ್ಯವೂ ಆಸ್ಪತ್ರೆಗೆ ಬೇರೆ ತಿರುಗಾಟ—ಅಲ್ಲಿ ಬ್ಯಾಂಡೇಜು ಬಟ್ಟೆಗಾಗಿ ಹೊಡೆದಾಟ—ಇವುಗಳು ಕಾಲು ಮುರಿದುಕೊಂಡ ಬಡಗುಮಾಸ್ತೆಗಳಿಗೇ ಗೊತ್ತು, ಮಹಾಸ್ವಾಮಿ!

೫. ದಿನ ದಿನವೂ ತರಹಾವಾರಿ ಅಕ್ಕಿಯನ್ನು ತಂದು ತಿನ್ನುವುದರಿಂದ ಬರುವ ಹೊಟ್ಟೆನೋವು ಈಗ ಸಾಧಾರಣವಾಗಿಬಿಟ್ಟಿದೆ. ಅಲ್ಲದೆ, ದಿನವೂ ಸ್ವಲ್ಪ ಗೋಧಿಯನ್ನು ಬೇರೆ ತಿನ್ನಬೇಕೆಂಬುವುದು ಸರ್ಕಾರದ ಘನ ಆಜ್ಞೆಯಷ್ಟೆ. ತುಪ್ಪಕ್ಕೆ ಗತಿಯಿಲ್ಲದ ಈ ಕಾಲದಲ್ಲಿ ಗೋಧಿಯನ್ನುಂಡು ಅನುಭವಿಸಬೇಕಾದ ಎದೆ ಶೂಲೆ, ಹೊಟ್ಟೆ ಶೂಲೆಗಳು ವರ್ಣಿಸಲಸಾಧ್ಯ. ಈ ನೋವಿನಲ್ಲಿ ಹೊತ್ತಿಗೆ ಸರಿಯಾಗಿ ಕಛೇರಿಗೆ ಹೇಗೆ ನಡೆದುಬರಲು ಸಾಧ್ಯ? ಸರ್ಕಾರದವರು ಶೇಕಡ ೩೦ರಷ್ಟು ಗೋಧಿಯನ್ನು ತಿನ್ನಬೇಕೆಂದು ಮಾಡಿದ್ದರೂ, ಹೊಟ್ಟೆ ಶೂಲೆ, ಎದೆ ಶೂಲೆಗಳು ಶೇಕಡಾ ಎಪ್ಪತ್ತೈದರಷ್ಟು ಏಕೆ ಬರಬೇಕೋ ಗೊತ್ತಿಲ್ಲ (೨೪ ಘಂಟೆಗಳಲ್ಲಿ ೧೮ ಘಂಟೆಗಳ ಕಾಲವಾದರೂ ಇರುತ್ತೆ.) ಇದನ್ನು ಘನ ಸರ್ಕಾರದ ವೈದ್ಯ ಮತ್ತು ಆರೋಗ್ಯ ಇಲಾಖೆಯವರು ಪರಿಶೋಧಿಸಬೇಕೆಂದು ವಿನಂತಿ. ಉಚಿತವಾಗಿ ಅಂಕಿ, ಅಂಶ ಮತ್ತು ಸಂಶೋಧನಾ ಸಾಮಗ್ರಿಗಳನ್ನು ಒದಗಿಸಿಕೊಡಲು ನಾವೆಲ್ಲಾ ತಯಾರಾಗಿದ್ದೇವೆ, ಮಹಾಸ್ವಾಮಿ.

೬. ಊಟಮಾಡಿ ನಾವೆಲ್ಲರೂ ಒಟ್ಟುಗೂಡಿ ಕಛೇರಿಗೆ ಹೊರಡುತ್ತೇವಷ್ಟೆ. ಮಾರ್ಗದಲ್ಲಿ ಯುದ್ಧಪರಿಸ್ಥಿತಿಯನ್ನು ನಾವು ಕೂಲಂಕಷವಾಗಿ ಪರಿಶೀಲಿಸದೆ ಹೊರಡುವುದಿಲ್ಲ. ಮಿತ್ರರಾಷ್ಟ್ರಗಳ ಜಯವು ನಮಗೆ ಅತ್ಯಂತ ಆನಂದವನ್ನುಂಟು ಮಾಡಿದೆ. ಯುದ್ಧವನ್ನು ಯಾವ ರೀತಿಯಲ್ಲಿ ಮುಂದುವರೆಸಬೇಕೆಂಬ ವಿಚಾರದಲ್ಲಿ ನಮಗೆಲ್ಲ ಸಹಜವಾಗಿ ಭಿನ್ನಾಭಿಪ್ರಾಯಗಳಿರುವುದರಿಂದ ಇದರ ಬಗ್ಗೆ ವಾದ ವಿವಾದಗಳು ನಡೆದೇ ನಡೆಯುವುವು. ಇದರಿಂದ ರಸ್ತೆಯಲ್ಲಿ ಹೋಗುವವರಿಗೆ ಏನೋ ಹೊಡೆದಾಟದಂತೆ ತೋರಿದರೂ ನಾವೆಲ್ಲ ಕೇವಲ ಮೈತ್ರಿಯಿಂದಲೇ ಇರುತ್ತೇವೆಂದು ಸ್ಪಷ್ಟಪಡಿಸುತ್ತೇನೆ, ಮಹಾಸ್ವಾಮಿ. ಆದರೆ, ಈ ಕಾರಣದಿಂದಲೂ ಸಹ ಕಛೇರಿಗೆ ಬಂದು ಸೇರುವುದು ಸ್ವಲ್ಪ ವಿಳಂಬವಾಗಬಹುದೆಂದು ಹೇಳದಿರುವುದಕ್ಕಾಗುವುದಿಲ್ಲ.

ಕೊನೆಯದಾಗಿ, ಮುಖ್ಯವಾಗಿ ತಾವು ಬಂದ ವೇಳೆ ನಾವು ಹಾಜರಿದ್ದು ತಮಗೆ ತಕ್ಕ ಸನ್ಮಾನ ಮಾಡುವುದಕ್ಕಾಗದಿದ್ದುದು ನಮ್ಮ ಅತ್ಯಂತ ದುರದೃಷ್ಟ! ಮತ್ತೊಂದು ವೇಳೆ ತಾವು ಭೇಟಿ ಕೊಡುವ ಮುನ್ನ ಖಂಡಿತವಾಗಿ ನಮಗೆ ತಿಳಿಯಪಡಿಸಿ, ಈಗ ದಯಾಳುಗಳಾದ ತಾವು ನಮ್ಮನ್ನು ಕ್ಷಮಿಸಬೇಕಾಗಿ ಪ್ರಾರ್ಥನೆ.

ದೇವರು ತಮಗೆ ದೀರ್ಘಾಯುವನ್ನೀಯಲಿ! ಸಾವಿರ ಕಾಲ ತಮ್ಮನ್ನೇ ನಮ್ಮಧಿಕಾರಿಗಳಾಗಿಟ್ಟಿರಲಿ! ಬಡವರ ಮೇಲೆ ಕೃಪೆಯಿರಲೆಂದು ದೈನ್ಯದಿಂದ ಬೇಡುವ,

ತಮ್ಮ ಅತ್ಯಂತ ವಿಧೇಯ,
ಆಫೀಸಿನ ಗುಮಾಸ್ತೆಗಳ ಪರವಾಗಿ.

ವಿ.ಸೂ.— ದಯವಿಟ್ಟು ತಾವು ಮುಂದಿನಸಲ ಬರುವಾಗ ಮೊನ್ನೆಯ ಹಾಗೆ ಅಮಾವಾಸ್ಯೆ ದಿವಸ ದಯಮಾಡಿಸಬಾರದಾಗಿ ಪ್ರಾರ್ಥನೆ. ಅದು ಕ್ರೂರವಾದ ದಿವಸ. ಅಲ್ಲದೆ, ಆ ದಿನ ಎರಡು ಘಂಟೆಗೆ ಕಚೇರಿ!

—ಬೀರಣ್ಣ.



“ ಏನ್ಸಾರ್, ನಿಮ್ಮನ್ನ ನೋಡಿದರೆ ಪಾರ್ಕಿನ ಕುರ್ಚಿ ಮೇಲೆ ಕುಳಿತೆದ್ದು ಬಂದ ಹಾಗೆ ಕಾಣಿಸುತ್ತೆ.”

ಕೆಂಪು ಟೋಪಿಯ "ಟೋಪಿ"

ಚಿಕ್ಕಬಳ್ಳಾಪುರದ ರೈಲು ಎಂದಿನ ಹಾಗೆ ಅತಿ ವೇಗವಾಗಿ ಓಡುತ್ತಿತ್ತು. ನಾನು ಸಣ್ಣದಾದ ಒಂದು ಕಂಪಾರ್ಟ್ಮೆಂಟಿನಲ್ಲಿ ಮೂಲೆಯಲ್ಲಿ ಕೂತು ಅಂದೇ (ಯಾರೋ) ಕೊಂಡುಕೊಂಡಿದ್ದ ಒಂದು ಪುಸ್ತಕವನ್ನ ಓದುತ್ತಿದ್ದೆ. ಅರ್ಧ ಓದಿ ಪುಸ್ತಕ ಬೇಜಾರಾಗಿ, ಮುಚ್ಚಿ ಕೆಳಗಿಟ್ಟೆ. ಎದುರಿನ ಪೀಠದಲ್ಲಿ ಒಬ್ಬ ಕೆಂಪು ಟೋಪಿಯ, ಪಿಳ್ಳುಜುಟ್ಟಿನ ಕಿರಿವಯಸ್ಸಿನ ಆಸಾಮಿ ಒಮ್ಮೆ ನನ್ನ ವದನಾರವಿಂದವನ್ನೂ, ಒಮ್ಮೆ ನನ್ನ ಪಕ್ಕದಲ್ಲಿದ್ದ ಸೂಟ್ ಕೇಸಿನ ಮೇಲೆ ಬರೆದಿದ್ದ ನನ್ನ ನಾಮಾಂಕಿತವನ್ನೂ ನೋಡುತ್ತಿದ್ದ. ಇದ್ದಕ್ಕಿದ್ದ ಹಾಗೆ ಆ ಮನುಷ್ಯ ನನ್ನ ಮುಖದ ಕಡೆಗೆ ಹೆಚ್ಚು ಗಮನಕೊಟ್ಟಹಾಗೆ ಮಾಡಿ;

"ಕ್ಷಮಿಸಿ" ಅಂದ.

"ಆ?" ಅಂದೆ.

"ಅಲ್ಲ, ತಾವೇನೇ ಎಸ್. ಎನ್. ಶಿ.?"

"ನಾನೇ. ಯಾಕೆ?"

"ಅಂದರೆ........ತಾವು........ತಾವೇನೇ........? ಅಂತ........"

"ನಾನೇ. ಕಥೆಗಿಥೆ ...."

"ಆಹಾ! ತಮ್ಮನ್ನ ನೋಡೋ ಭಾಗ್ಯ ಈವತ್ತು ಸಿಕ್ತು. ಇಷ್ಟು ದಿನ ತಮ್ಮ ಕಥೆಗಳನ್ನ ಒಂದನ್ನೂ ಬಿಡದೆ ಓದಿದ್ದೇನೆ. ಮೊನ್ನೆ ಕೂಡ ಯಾವುದರಲ್ಲೋ........"

"ಕೊರವಂಜೀಲಿ ಇರಬೇಕು."

"ಹಾ! ಕೊರವಂಜೀಲಿ. ಬಹಳ ಸ್ವಾರಸ್ಯವಾಗಿತ್ತು. ನನ್ನ ಅದೃಷ್ಟ. ತಮ್ಮನ್ನ........ಈ ದಿನ........ಇಲ್ಲಿ ......ಹಿ ಹಿ ಹಿ!"

ರೈಲು ದೇವನಹಳ್ಳಿಯಲ್ಲಿ ನಿಂತಿತು.

"ಬನ್ನಿ ಸಾರ್. ಕಾಫಿ ಗೀಫಿ........"

"ಬಹಳ ಗಲಾಟೆ ಇದ್ದಾಗಿದೆ........"

"ಅಯ್ಯೋ, ಬನ್ನಿ ಸಾರ್ ಸಿಗುತ್ತೆ."

ಅತಿ ಸಲುಗೆಯಿಂದ ಆತ ನನ್ನ ಹೆಗಲಿನ ಮೇಲೇ ಕೈಹಾಕಿ ಹೋಟಲಿನ ನೂಕು ನುಗ್ಗಲಿನಲ್ಲಿ ಕರೆದುಕೊಂಡು ಹೋದ.

ಇಷ್ಟರಲ್ಲಿ ನನ್ನ ಮೇಲೆ ನನಗೇ ನಂಬಿಕೆಯಿಲ್ಲದೆ ಹೋಗಿತ್ತು. ನನ್ನ ಕಥೇನ ಈತ ಇಷ್ಟರಮಟ್ಟಿಗೆ 'ಇದು' ಮಾಡಿದ್ದಾನಲ್ಲ! ಅಂತ. (ನನ್ನ ಕಥೆಯನ್ನ ಓದಿ ರುಚಿಕಂಡವನು ಇಲ್ಲಿಯವರೆಗೆ ಒಬ್ಬನೇ ಅನ್ನುವ ಭಾವನೆ ನನಗಿತ್ತು. ಅದೂ ಆತ ಆನಂದ ಭವನದಲ್ಲಿ ದೋಸೆಯ ಕೈ ಒರಸಿಕೊಳ್ಳಲು ತನಗೆ ಸಿಕ್ಕಿದ ಕೊರವಂಜಿ ಹಾಳೆಯಲ್ಲಿ ಓದಿದ್ದು ನನ್ನ ಕಥೆಯನ್ನ. ಓದಿದಾಗ ಆತನೇನೋ ನಕ್ಕ. ಆದರೆ, ಕಥೆ ಓದಿ ನಕ್ಕನೋ ಇಲ್ಲಾ ದೋಸೆಯ ರುಚಿಯ ಆನಂದಕ್ಕೆ ನಕ್ಕನೋ ಅದೂ ಸಂದೇಹವಾಗಿದೆ). ಆದರೆ, ಈವತ್ತು ಸಿಕ್ಕಿದ್ದ ಈ ಕೆಂಪು ಟೋಪಿಯವನು ನನ್ನ ಕಥೆಯನ್ನ ನಿಜವಾಗಿ ಮೆಚ್ಚಿದ್ದಹಾಗಿತ್ತು. ಕಾಫಿ ಕುಡಿದ ಮೇಲೆ ಆತ ನನ್ನ ಜೊತೆಯಲ್ಲಿ ಕಂಪಾರ್ಟ್‌ಮೆಂಟಿಗೆ ಬಂದು ರೈಲು ಹೊರಡುವ ಹೊತ್ತಿಗೆ ಸರಿಯಾಗಿ ಕೆಂಪು ಟೋಪಿಯನ್ನ ತಲೆಗೇರಿಸಿ "ನಮಸ್ಕಾರ" ಅಂದು, ಇಳಿದು ಹೊರಟು ಹೋದ.

ನಾನು 'ನಂದಿ'ಯಲ್ಲಿ ಇಳಿಯುವವರೆಗೆ ಅದೇ ಯೋಚನೆ. ಪರವಾಗಿಲ್ಲ! ನನ್ನ ಕಥೆಯನ್ನ ಕಡೇಪಕ್ಷ ಇಬ್ಬರಾದರೂ ಒಪ್ಪಿ ಆನಂದ ಪಟ್ಟಿರುವ ಹಾಗಿದೆ, ಅಂದುಕೊಂಡೇ ಇಳಿದೆ. ಟಿಕೆಟ್ ಕಲೆಕ್ಟರು ಸ್ಟೇಷನ್ನಿನ ಬಾಗಿಲಲ್ಲಿ ಟಿಕೆಟ್ ಕೇಳಿದಾಗಲೂ ಅದೇ ಯೋಚನೆ. ನನ್ನ ಬೆನ್ನು ನಾನೇ ತಟ್ಟಿಕೊಳ್ಳುವಷ್ಟು ಆನಂದವಾಗಿತ್ತು ನನಗೆ. ಟಿಕೆಟ್ಟು ಹುಡುಕುತ್ತಿದ್ದಾಗ ಅದು ನನ್ನ ಪರ್ಸಿನಲ್ಲಿದೆಯೆಂತ ನೆನಪಿಗೆ ಬಂತು. ಒಳಗಡೆ ಜೇಬಿಗೆ ಕೈಹಾಕಿ ಪರ್ಸಿಗಾಗಿ ನೋಡಿದೆ........?

ಸ್ಟೇಷನ್‌ಮಾಸ್ಟರಿಗೆ ಎಷ್ಟು ಹೇಳಿದರೂ ತಿಳಿಯಲಿಲ್ಲ. "ಪರ್ಸು ದೇವನಹಳ್ಳಿವರೆಗೂ ಇತ್ತು. ಯಾರೋ ಜೇಬುಗಳ್ಳ ಹೊಡೆದುಬಿಟ್ಟಿದ್ದಾನೆ. ಅದರಲ್ಲಿ ಸತ್ಯವಾಗಿ ಟಿಕೇಟು ಇತ್ತು........"

ಸ್ಟೇಷನ್‌ಮಾಸ್ಟರು ಅದೆಲ್ಲಾ "ಗೊತ್ತಿಲ್ಲ" ಅಂದರು.

ಗಿಲ್ಟ್ ಎಡ್ಜಿನ ವಿಸಿಟಿಂಗ್ ಕಾರ್ಡಿನ ಮೇಲೆ ಪಾರ್ಕರು ಪೆನ್ನಿನಿಂದ ಅಡ್ರೆಸ್ಸು ಬರೆದುಕೊಟ್ಟರೆ ತಾನೇ ಸುಮ್ಮನಾಗುತ್ತಾರೆ ಅಂದುಕೊಂಡು, ಕಾರ್ಡನ್ನು ತೆಗೆದು ಪೆನ್ನಿಗಾಗಿ ನೋಡಿದೆ. ಪಾರ್ಕರ್ ಪೆನ್ನು ಪರ್ಸಿನ ಜರಿಹಿಡಿದು ಆ ಕೆಂಪು ಟೋಪಿ ಪಾಪಿಯ ಪಾಲಾಗಿ ಹೋಗಿತ್ತು........

—ಎಸ್. ಎನ್. ಶಿ.

———o———

ಯುದ್ಧ ಕಾಲದ ಬೆಲೆ

ಸಂಧ್ಯಾಕಾಲದಲ್ಲಿ ನಮ್ಮ ಮನೆಯ ಮೇಲೆ ಸೂರ್ಯನ ರಶ್ಮಿ ಬಿದ್ದರೆ, ಮನೆ ದಿಟವಾಗಲೂ ಚಿನ್ನದಿಂದ ಕಟ್ಟಿದ್ದೊ ಎನ್ನಿಸುತ್ತದೆ. ಸ್ವಲ್ಪ ಮಾಸಿದ ಗೋಡೆಗಳು, ಮಂಗಳೂರು ಹೆಂಚು, ಅಲ್ಲಲ್ಲೇ ಗಾಜಿನ ಹೆಂಚು ಇವೆಲ್ಲಾ ಸೂರ್ಯನ ಕಿರಣಗಳಿಂದ ಅಲಂಕೃತವಾದರೆ, ಚಿನ್ನದ ಮನೆ, ವಜ್ರದ ಕೆಂಪಿನ ಹೊದಿಗೆ ಹಾಕಿದಂತೆಯೇ ಕಾಣುತ್ತದೆ.

ರೇವತಿಯು ಮನೆ ವರಾಂಡದಲ್ಲಿದ್ದವಳು ಇದೆಲ್ಲವನ್ನೂ ನೋಡಿದಳು. 'ಎಷ್ಟು ಚೆನ್ನಾಗಿದೆ ಈ ಮನೆ' ಎಂದಳು. ಹಾಗೆಯೇ ಆ ತರಹ ಮಾತುಗಳನ್ನು ನಿಲ್ಲಿಸಿ, "ಒಳಗೆ ಹೋಗಿ ಸಾಮಾನುಗಳ ಪಟ್ಟಿಯನ್ನು ಮಾಡಬೇಕು" ಎಂದು ಹೇಳಿ ಮನೆಯೊಳಕ್ಕೆ ಹೋದಳು. ಹಾಗೆ ಹೇಳುವಾಗ ಗಂಟಲು ಸ್ವಲ್ಪ ಕೆಟ್ಟಂತೆ ಕಾಣಿಸಿತು.

ಆ ವೇಳೆಗೆ ಗುಬ್ಬಚ್ಚಿಯೊಂದು ಹೆಬ್ಬಾಗಿಲ ಹೊಸಲಿನ ಹತ್ತಿರ ಬಂದು ಅಕ್ಕಿಕಾಳು ಬಾಯಲ್ಲಿ ಹಾಕಿಕೊಳ್ಳಲು ಹುಡುಕಾಡುತ್ತಿತ್ತು. "ಬಾ ಬಾ ಗುಬ್ಬಿ, ಮನೆಯೊಳಗೇ-ಬಾ ನಾವೀ ಮನೆಯನ್ನು ಮಾರಿಬಿಟ್ಟು ಹೋಗುತ್ತೇವೆ. ಅದಕ್ಕೆ ಮೊದಲೇ ಒಮ್ಮೆ ಒಳಗೆ ಬಂದು ಹೋಗು ಎಂದು ಹೇಳಿದೆ.

ಗುಬ್ಬಿಯು ಆಶ್ಚರ್ಯ ಚಕಿತವಾಯಿತು. ತಲೆಯನ್ನು ಒಂದು ಪಕ್ಕಕ್ಕೆ ತಿರುಗಿಸಿ, ಒಂದೇ ರೆಕ್ಕೆಯನ್ನಾಡಿಸಿತು.

"ಇಲ್ಲ ದಿಟವಾಗಲೂ ನಾವು ಈ ಮನೆಯನ್ನು ಬಿಟ್ಟುಬಿಡುತ್ತೇವೆ" ಎಂದೆ.

ಗುಬ್ಬಿಯು ನಂಬಿದಂತೆ ಕಾಣಲಿಲ್ಲ.

ಹಾಗೆಯೇ ಕಲ್ಲು ಬೆಂಚಿನ ಮೇಲೆ ಕುಳಿತು, ಹಸಿರು ಹುಲ್ಲಿನ ಸಂಧ್ಯಾಚೆಂದವನ್ನು ನೋಡುತ್ತಾ ಇದ್ದೆ.

* *

ಇದ್ದಕ್ಕಿದ್ದ ಹಾಗೆಯೇ ಮುದುಕ ಬ್ರಾಹ್ಮಣನೋರ್ವನು ಅಲ್ಲಿಗೆ ಬಂದು ನನ್ನನ್ನೆಬ್ಬಿಸಿದಂತಾಯಿತು.

'ಏನಿದು, ಈ ಮನೆಯನ್ನು ಮಾರಬೇಕು ಎಂದಿರುವೆಯಲ್ಲಾ' ಎಂದು ಕೇಳಿದ.

'ನಿನಗೆ ಯಾರು ಹೇಳಿದರು, ನೀನು ಯಾರು' ಎಂದೆ.

'ನನಗೆ ಕಂಟ್ರಾಕ್ಟರ್ ಕಪಿಲಪ್ಪ ಹೇಳಿದ. ಆತನೇ ನನಗೆ ಹೇಳಿದ ನನ್ನ ಪರಿಚಯ ನಿನಗಿಲ್ಲದಿರಬಹುದು. ನಾನು ಕಾಲಪುರುಷ. ಹೀಗೆ ಕೇಳಿದನೆಂದು ನೀನು ಕೋಪಿಸಿಕೊಳ್ಳಬೇಡ.'

'ಛೇ, ಛೇ, ಕೋಪವೇಕೆ, ಏನೂ ಇಲ್ಲ' ಎಂದು ನಾನಂದೆ.

'ಹಾಗಿದ್ದರೆ, ಮನೆಯನ್ನು ಏಕೆ ಮಾರುತ್ತೀ' ಜೀವನಕ್ಕೆ ಹಣ ಸಾಲದೆ' ಎಂದು ಕೇಳಿದ.

'ಜೀವನಕ್ಕೆ ತಕ್ಕಷ್ಟು ಸಾಕು. ಆದರೆ, ಹೆಚ್ಚು ಖರ್ಚಿಗೆ ಹಣವಿಲ್ಲ. ರೇವತಿಗೆ ಒಡವೆಗಳೊಂದೂ ಇಲ್ಲ. ಹೊಸ ಸೀರೆ ತೆಗೆದುಕೊಂಡು ಮೂರು ವರ್ಷವಾ

ಯಿತು. ನನಗೂ ಒಂದು ಹೊಸ ಬೈಸಿಕಲ್ಲು ಬೇಕು ಎನಿಸುತ್ತೆ. ಇವಕ್ಕೆಲ್ಲಾ ಹಣವಿಲ್ಲ. ಈ ಮನೆಯೇನೋ ನಮಗೆ ಬಲು ಪ್ರಿಯ. ಆದರೆ, ಅದನ್ನು ಇಟ್ಟುಕೊಳ್ಳುವ ಯೋಗ್ಯತೆ ನಮಗಿಲ್ಲ. ಆದರೆ, ಹಣ ಹುಳಿತುಹೋಗುತ್ತಿರುವ ಕಂಟ್ರಾಕ್ಟರ್ ಕಪಿಲಪ್ಪನಿಗೆ ಮನೆಯಿಲ್ಲ. ಮೊರದ ವ್ಯಾಪಾರಕ್ಕೆ ಕೈಹಾಕಿದ ಕೂಡಲೇ ಈ ಯುದ್ಧ ಶುರುವಾಯಿತು. ಹೇಗೋ ಮೊರ ಮೊರದಲ್ಲಿ ಹಣ ಸಂಪಾದಿಸಿದ. ಅವನಿಗೆ ಈ ಮನೆ ಮೇಲೆ ಬಹಳ ಖಾಯಿಷು. ಅದಕ್ಕಾಗಿಯೇ ಒಂದಕ್ಕೆ ಹತ್ತರಷ್ಟು ಹಣ ಕೊಡಲು ಸಿದ್ಧನಾಗಿದ್ದಾನೆ.'

ಮುದುಕನಿಗೆ ಸ್ವಲ್ಪ ಆತುರ, ಸ್ವಲ್ಪ ಬೇಸರ.

'ಇರಲಿ ಇರಲಿ, ಅದೆಲ್ಲಾ ನನಗೆ ಗೊತ್ತು. ಕಪಿಲಯ್ಯನ ಮುತ್ತಾತ ಕೂಡ ಮುನ್ನೂರು ವರ್ಷಗಳ ಕೆಳಗೆ ಹೀಗೆ ಈ ಮನೆಯನ್ನು ಕೊಂಡುಕೊಳ್ಳಲು ಬಂದಿದ್ದ. ಆಗಲೂ ಹೀಗೆ ದುಬಾರಿಯಾಗಿ ಬೆಲೆಯನ್ನೇರಿಸಿದ. ಆದರೆ ನಿಮ್ಮ ಮುತ್ತಾತ ಕೊನೆಯಲ್ಲಿ 'ಆಗುವುದಿಲ್ಲ' ಎಂದು ಖಂಡಿತವಾಗಿ ಹೇಳಿಯೇ ಬಿಟ್ಟ. ಅದಕ್ಕೆಲ್ಲಾ ರೇವತಿಯ ಸಲಹೆ ಕೇಳುವುದು ಒಳ್ಳೆಯದು' ಎಂದ.

'ಬಹಳ ಉಪಕಾರ ಮಾಡಿದ ಹಾಗಾಯಿತು ನಿಮಗೆ ಅನಂತ ವಂದನೆಗಳು' ಎಂದು ಹೇಳಿ, ಹಗಲು ಗನಸಿನಿಂದ ಎಚ್ಚೆತ್ತಂತೆ ಎದ್ದು ಒಳಕ್ಕೆ ಹೋದೆ.

ಒಳಗೆ ಹೋಗುವಾಗ ಅಂಗಳದಲ್ಲಿ ರೇವತಿಯು ಖಾಲೀ ಗೋಡೆಯೊಂದನ್ನುದ್ದೇಶಿಸಿ ತನ್ನಷ್ಟಕ್ಕೆ ತಾನು ಮಾತನಾಡಿಕೊಳ್ಳುತ್ತಿದ್ದಳು. ನಿಮ್ಮನ್ನೆಲ್ಲಾ ಬಿಟ್ಟು ನಾನು ಹೇಗೆ ಬದುಕಿರಲಾಗುತ್ತದೋ ಕಾಣೆ. ಆದರೆ, ನಿಮ್ಮಿಂದ ಬೇಕಾದಷ್ಟು ಬಟ್ಟೆ ಬರೆ ಕೊಂಡುಕೊಳ್ಳಬಹುದು' ಎಂದು.

ಒಳಗೆ ಹೋದೆ. "ಸಾಮಾನೆಲ್ಲವನ್ನೂ ಒಂದು ರೀತಿಯಲ್ಲಿ ಪಟ್ಟಿ ಹಾಕಿದ್ದೇನೆ. ಕಪಿಲಪ್ಪ ಬರುವುದು ಇನ್ನೂ ತಡವೇ ಎಂದು ಕೇಳಿದಳು. ಹೂಂ, ಎಂದು ನಾನು ಉತ್ತರವಿತ್ತೆ.

ಸಾಯಂಕಾಲ ಏಳು ಏಳೂವರೆ ಗಂಟೆಗೆ ಕಪಿಲಪ್ಪನು ದೊಡ್ಡ ಕಾರಿನಲ್ಲಿ ನಮ್ಮನೆಗೆ ಬಂದ. ಪರಸ್ಪರ ಕ್ಷೇಮ ಸಮಾಚಾರಗಳಾದ ಮೇಲೆ ನಾನು ಹೇಳಿದೆ, 'ತಾವು ಇಷ್ಟು ತೊಂದರೆ ತೆಗೆದುಕೊಂಡು ಇಷ್ಟು ದೂರ ಬಂದಿದ್ದು ಪ್ರಯೋಜನವಿಲ್ಲ. ನಾನು ಈ ಮನೆಯನ್ನು ಮಾರುವುದಿಲ್ಲ ಎಂದು ನಿರ್ಧರಿಸಿದ್ದೇನೆ" ಎಂದು ಹೇಳಿದೆ.

ಈ ಮನೆಯ ನ್ಯಾಯವಾದ ಬೆಲೆಗಿಂತ ಹೆಚ್ಚಾಗಿ ನಾನು ಬೆಲೆ ಕೊಡಲು ಸಿದ್ಧನಿದ್ದೇನೆ. ಹೆಚ್ಚು ಹೆಚ್ಚಾಗಿ ಆಗುವುದಿಲ್ಲ ಎಂದು ಮೂರ್ಖತನ ಮಾಡಬೇಡ. ಇಗೋ ಇಲ್ಲಿ ಎಲ್ಲಾ ಕಾಗದಗಳನ್ನೂ ಬರೆಸಿ ತಂದಿದ್ದೇನೆ' ಎಂದು ಕಾಗದ ಪತ್ರಗಳ ಗಂಟು ಬಿಚ್ಚಿದ.

'ಯಾಕೆ ತೊಂದರೆ ತೆಗೆದುಕೊಳ್ಳುವಿರಿ. ನಾನು ಮನೆಯನ್ನು ಮಾರುವುದಿಲ್ಲ' ಎಂದೆ.

'ಕಪಿಲಪ್ಪನು ಕುಪಿತನಾದ. ಕಾಗದದ ಲಕ್ಕೋಟೆಯನ್ನು ತಿರುಗಿ ಕೈಗೆ ತೆಗೆದುಕೊಂಡು, "ಇನ್ನೂ ಹೆಚ್ಚು ಹಣದಾಸೆ ನಿಮಗೆ. ಯಾವನು ಕೊಡುತ್ತಾನೋ ಅವನ ಹತ್ತಿರವೇ ವ್ಯಾಪಾರ

ವಾಗಲಿ ಎಂದು ಹೇಳಿ ರಭಸದಿಂದ ಹೊರಟು ಹೋದ. ಹೋಗುವಾಗ ಹೊಸಿಲನ್ನೆಡವಿ ಬಯ್ಯುತ್ತಾ ಹೋದ

'ಯಾರದು ಬೈದಂತಿತ್ತು' ಎಂದು ರೇವತಿಯು ಒಳಗಿನಿಂದ ಬಂದಳು.

'ಬೈಗಳಲ್ಲ ಒಳ್ಳೆಯ ಮಾತುಗಳು. ನಾನು ಮನೆಯನ್ನು ಮಾರುವುದಿಲ್ಲವಲ್ಲಾ ಎಂದು ದುಃಖದಿಂದ ಕಪಿಲಪ್ಪನು ಆಡಿದ ಮಾತುಗಳು' ಎಂದೆ.

'ರೇವತಿಯು ಮಾತೇ ಆಡಲಿಲ್ಲ. ಮೊಗವೆಲ್ಲಾ ಹಿರಿಹಿಗ್ಗಿನಿಂದ ಅಲಂಕೃತವಾಯಿತು.

ಗುಬ್ಬಿಯೂ ಒಳಕ್ಕೆ ಬಂದು ಅಕ್ಕಿಕಾಳನ್ನಾರಿಸತೊಡಗಿತು.

ಸಂಧ್ಯಾರಾಗವು ಇನ್ನೇನು ಮುಗಿಯುವ ಮೊದಲು ಮನೆಯನ್ನೆಲ್ಲಾ ಬೆಳಗಿ ಹೋಯಿತು.

ವಸ್ತುಗಳ ದಿಟವಾದ ಬೆಲೆಯು ಆಗಲಾದರೂ ನಮಗೆ ಕಂಡಿದ್ದು—ನಮ್ಮ ಪುಣ್ಯ.

ಸೇವಾ—ಗಳ ಅಥವಾ ಬೊಂಬೇ ಗತಿ

ಹೆತ್ತಾಗ ಮೊರ ನೀನು, ಸತ್ತಾಗ ಹೊರೆ ನೀನು,
ಮನದ ಮುಕ್ತಿಗೆ ಗ್ರಂಥ, ದನದ ಕುತ್ತಿಗೆ ಗಂಟೆ,
ಮೊಸರು ಕಡೆಯಲು ನೀನು, ಕೆಸರು ತೆಗೆಯಲು ನೀನು,
ಬಾಗಿನಕೆ ನೀ ಬೇಕು, ಬೀಸಲಿಕೆ ನೀ ಸಾಕು,
ದಾಳಿಮಾಡಲು ನೀನು, ಗೋಡೆ ಏರಲು ನೀನು,
ರಸ ಬೂರಿಗೆ ಗೂಡೆ, ಕಸದ ಬುಟ್ಟಿಗೆ ಕೂಡ,
ಅತ್ತಾಗ ನೀ ಗಿಲುಕಿ, ಎತ್ತಲೂ ನೀ ನಿರುವಿ,
ಪದ್ಯ ಬರೆಯಲು ಬೊಂಬು! ಮದ್ಯ ತುಂಬಲು ಬೊಂಬು!
ನೀನಾರೊ, ಬೊಂಬೆ!, ಎನಗೆ?
ಹೇಳಣ್ಣ!
ನಾನಾರೊ, ಬೊಂಬೆ!, ನಿನಗೆ?

—ಬಿದಿರೆ.

ಕುದುರೆ ಕಷಾಯ

"ಶಾರದಾ ಪುರದಲ್ಲಿ"

"ಇವರನ್ನು ನೋಡಿದೆಯಮ್ಮಾ" ಎಂದು ಲಲಿತೆ ಕೇಳಿದಳು, ತನ್ನ ತಾಯಿಯನ್ನು, ಸಾಯಂಕಾಲ ಏಳು ಗಂಟೆ ಸಮಯದಲ್ಲಿ—ಶಾರದಾಪುರದ ೨೩ಲನೇ ಮನೆಯಲ್ಲಿ—

'ಇವರು' ಆಗ ತಾನೆ ಈಸಿ ಚೇರಿನ ಮೇಲೆ ಮಲಗಿ ಅರೆನಿದ್ರೆ ಬಂದಂತೆ ಅರೆಕಣ್ಣು ಬಿಟ್ಟುಕೊಂಡು ಬಿದ್ದಿದ್ದರು ಸುಸ್ತಾಗಿ. ಅತ್ತೆಮ್ಮನವರು ಒಂದು ಬಾರಿ ನೋಡಿದರು. "ಎಂದಿನಂತೆಯೇ ಕಾಣುತ್ತಾರಲ್ಲೇ—ಆದರೆ, ಇನ್ನೂ ಸ್ವಲ್ಪ ಹೆಚ್ಚು ಶೂನ್ಯತೆ—ಇಸ್ಪೀಟ್ ಆಡಿ ಬಂದಂತಿದೆ" ಎಂದರು.

ಸೋಮಸುಂದರ ಎಚ್ಚೆತ್ತಂತೆ ಕಣ್ಣುಬಿಟ್ಟ. "ಮಲಗಿದ್ದವರನ್ನು ಹಾಗೆಲ್ಲಾ ಎಬ್ಬಿಸಬಾರದು, ಏನೋ ದುಡಿದು ಸುಸ್ತಾಗಿ ಬಂದು ಮಲಗಿದರೆ ಆಗಲೆ ತಾಯಿ ಮಗಳು ಈ ಕುಹಕದ ಮಾತಾಡೋದೇ—ಎದ್ದಾಗ ಬಿಸಿ ನೀರು ಕೊಟ್ಟು ಕಾಲು ತೊಳೆದು, ಪಾಲ್ಪೆಣ್ಣೆಗಳ ಉಣಲಿಕ್ಕೆ ಕೊಡಬೇಕೋ—ಹೀಗೆ ಮಾತಾಡಿ ಎಬ್ಬಿಸುವುದೊ" ಎಂದನು.

"ಏಕಿದು ಸನ್ನಿ ಮಾತಾಡುತ್ತಿದ್ದೀರಿ" ಎಂದು ಲಲಿತೆ ಹತ್ತಿರಕ್ಕೆ ಬಂದಳು. ಹಣೆ ಮೇಲೆ ಕೈಯಿಟ್ಟಳು. "ಬೇಯ್ತಾಯಿದೆ ಅಮ್ಮಾ—ಜ್ವರ ಬಂದಿದೆ" ಎಂದಳು.

"ಸುಮ್ಮನಿರು ಇಷ್ಟು ದಿವಸಾನೂ ಇಲ್ಲದ್ದು ಈಗೆಲ್ಲಿ ಬಂತು ಜ್ವರ. ಜ್ವರಾರಿ ಮಾತ್ರೆ ಅಂಗಡಿ ಎದುರಿಗೇ ದಿನಾಲೂ ಬರುತ್ತೇನೆ. ನನಗೆಲ್ಲಿ ಬಂತು, ನಿಂಗೆ ಛಳಿ ಎಂದು ಕಾಣುತ್ತೆ, ನಿನ್ನ ಕೈ ಆನೆಕಲ್ಲು ಮಡುವಿನ ಹಾಗೆ ಇದೆ" ಎಂದ.

"ಗಂಟಲು ನೋವುತ್ತೆಯೇ" ಎಂದಳು ಲಲಿತೆ.

"ಇಲ್ಲ ಒಣಗುತ್ತೆ" ಎಂದ ಯೋಚನೆ ಮಾಡದೆ.

"ಒಣಗದೆ ಇದ್ದಿದ್ದೆಂದು, ಸಕ್ಕರೆ ಪಾನಕಕ್ಕೆ ಸಿದ್ಧ—ಇನ್ನೇನೂ ಇಲ್ಲದಿದ್ದರೆ.

"ಹೌದು ಕಣೆ—ಮುಖ ಎಲ್ಲಾ ಧುಮಧುಮಗುಟ್ಟುತ್ತೆ" ಎಂದರು ಅತ್ತೆಮ್ಮನವರು—ಇರಲಿ, ಸ್ವಲ್ಪ ಕಷಾಯ ಹಾಕಿ ಕೊಡುತ್ತೇನೆ. ಸರಿಹೋಗುತ್ತೆ ಎಂದರು.

ಸೋಮ ಸುಂದರ ಬೆಚ್ಚಿಬಿದ್ದು ಎದ್ದು ನಿಂತ. ಕಷಾಯ ಅಂದ ಕೂಡಲೆ ತಕ್ಷಣ ಅವನ ಮನಸ್ಸಿನ ಕಣ್ಣುಗಳೆದುರಿಗೆ ಹೊಳೆಯಿತು—ಕಾಲಕೂಟ—ಕಾರ್ಕೋಟಕ—ಹೋಟಲ ಕಾಫಿ—

ಅತ್ತೆಮ್ಮನವರ ಕಷಾಯ—ಅದು ಕುಡಿದ ಕೂಡಲೇ ಘಾಟು ತಡೆಯಲಾರದೆ ನಾಲಿಗೆ ಹೊರಗೆ ಬಂದು ಬೀಳುವುದು. ನೋಡಿದವರೆಲ್ಲಾ "ಇದೇನಯ್ಯಾ, ನರಸಿಂಹಾವತಾರ, ನಾಲಿಗೆ ಒಳಕ್ಕೆ ಎಳೆದುಕೊಳ್ಳುವುದಕ್ಕಾಗುವುದಿಲ್ಲವೇ ಎನ್ನುವುದು. ಇನ್ನು ಕೆಲವರು, ಓಹೋ ದತ್ತಾತ್ರೇಯರ ಜತೆಯಲ್ಲಿ ಶಿಷ್ಯವೃತ್ತಿ ಮಾಡುತ್ತಿದ್ದರಾ ಹೋದ ಜನ್ಮದಲ್ಲಿ—ಆ ವಾಸನೆ ಈಗಲೂ ಇದೆ ಎನ್ನುವುದು, ಎಲ್ಲವೂ ತೋಚಿತು. ಎದ್ದುನಿಂತು, ತನ್ನ ಮನೆ ಯಜಮಾನ್ಯಕೆಯನ್ನು ನೆನೆಸಿಕೊಂಡು, "ಉಹ್ಞು" ಕಷಾಯ ಕುಡಿಯುವುದು ಅಸಾಧ್ಯ. ಊರಲ್ಲೆಲ್ಲಾ ಗಂಟಲಮಾರಿ ಇದೆಯಂತೆ. ಅದಕ್ಕೆ ತಕ್ಷಣ ಸೂಜಿ ಹಾಕಿಸಿಕೊಳ್ಳಬೇಕಂತೆ. ಡಾಕ್ಟರನ್ನು ಕರೆಸಿದರೆ ಔಷಧಿ ತೆಗೆದುಕೊಳ್ಳುತ್ತೇನೆ. ಇಲ್ಲದೆ ಇದ್ದರೆ, ಹಾಗೆಯೇ ಪ್ರಾಣ ಬಿಡುತ್ತೇನೆ. ನನಗೆ ಇನ್ನೇನು ಆಗಬೇಕು. ಈ ಲೋಕದಲ್ಲಿ ಪಡುವ ಸುಖವೆಲ್ಲಾ ಪಟ್ಟದ್ದಾಯಿತು, ಎಂದು ವೇದಾಂತಿಸಿದನು.

ಲಲಿತೆಗೆ ಯೋಚನೆ. ತಾಯಿಯ ಕಷಾಯದಿಂದ ವಾಸಿಯಾಗುವ ಖಾಯಿಲೆಗೆ ವೈದ್ಯನನ್ನು ಕರೆಸಿ ಅವನ ಹೊಟ್ಟೆ ಏಕೆ ತುಂಬಬೇಕು? ಎಂದೊಮ್ಮೆ—ಅಯ್ಯೋ ಇದ್ದೊಬ್ಬ ಗಂಡನನ್ನು ಗಂಟಲಮಾರಿಗೆ ತುತ್ತುಕೊಟ್ಟರೆ ಮುಂದೆ ಜನ ಏನನ್ನುತ್ತಾರೆ ಎಂದು ಒಮ್ಮೆ ಹೀಗೆ ಆಂದೋಲನಕ್ಕೆ ಸಿಕ್ಕಿದಳು.

ಅತ್ತೆಮ್ಮನವರು ತೀರ್ಮಾನಿಸಿದರು, ಇಷ್ಟು ಹೊತ್ತಿನಲ್ಲಿ ಬೇವಿನ ಚಕ್ಕೆ ಯಾರು ತಂದು ಕೊಡುತ್ತಾರೆ, ಆದ್ದರಿಂದ ಕಷಾಯ ಮಾಡುವಹಾಗೇ ಇಲ್ಲ. ಡಾಕ್ಟರನ್ನೇ ಕರೆಸಿಬಿಡೋಣ. ಅವನ ಖಯಾಲೂ ತೀರಿಸಿಯೇ ಬಿಡೋಣ ಎಂದಳು.

ಸರಿ, ಡಾಕ್ಟರು ಬಂದರು. ಗಂಟಲು ನೋಡಿದರು ಸ್ವಲ್ಪ ಕೆಮ್ಮಿದರು, ನಾಲಿಗೆ ನೋಡಿದರು ಇನ್ನು ಸ್ವಲ್ಪ ಕೆಮ್ಮಿದರು, ಹೊಟ್ಟೆ ಮುಟ್ಟಿದರು ಇನ್ನೂ ಸ್ವಲ್ಪ ಕೆಮ್ಮಿದರು, ಕೈ ಹಿಡಿದರು ಕೆಮ್ಮಿದರು,—ಇವರಲ್ಲಿ ಯಾರಿಗೆ ಖಾಯಿಲೆ ಎಂದು ಅನುಮಾನ ಬರುವ ತನಕ ಕೆಮ್ಮಿದರು, ಪರೀಕ್ಷಿಸಿದರು.

ನಂತರ ಮನೆಯಿಂದ ಔಷಧಿ ಕಳಿಸುತ್ತೇನೆ, ದವಾಖಾನೆಯ ಬಾಗಿಲೆಲ್ಲಾ ಈಗ ಹಾಕಿರುತ್ತೆ ಎಂದಂದು ಹೊರಟುಹೋದರು. ಮನೆಯಿಂದ ಒಂದು ತರಹ ಕಪ್ಪು ಔಷಧಿಯನ್ನು ಕಳುಹಿಸಿದರು.

ತಾಯಿ ಮಗಳು ಇಬ್ಬರೂ ಸೇರಿ ಒಂದು ಹೊತ್ತು ಔಷಧಿಯನ್ನು ಕುಡಿಸಿಯೇ ಬಿಟ್ಟರು. ಸೋಮಸುಂದರನು ಕುಡಿದವನೇ ಹಾಗೆಯೇ ನಾಲಿಗೆ ಹೊರಗೆ ಚಾಚಿ ಎರಡು ನಿಮಿಷ ನಿಶ್ಚೇಷ್ಟಿತನಾದ. ಜ್ಞಾನ ಬಂದ ಮೇಲೆ—ಇನ್ನು ಮೇಲೆ ಔಷಧಿ ಬೇಡ, ಕಷಾಯಾನೇ ಕುಡಿಯುತ್ತೇನೆ, ನಾನೇ ಹೋಗಿ ಬೇವಿನ ಚಕ್ಕೆ ತರುತ್ತೇನೆ ಎಂದಂದ.

ಈಗೇನೂ ಬೇಡ, ನಾಳೆ ಹೊತ್ತಿಗೆ ವಾಸಿಯಾಗದೇ ಇದ್ದರೆ, ಕಷಾಯ ಮಾಡುತ್ತೇನೆ ಎಂದರು ಅತ್ತೆಮ್ಮನವರು.

ಮಾರನೆಯ ದಿನ ಸೋಮಸುಂದರನಿಗೆ ಪೂರ್ಣ ವಾಸಿಯಾಗಿತ್ತು. ಸಾಯಂಕಾಲ ವೈದ್ಯನು ರಸ್ತೆಯಲ್ಲಿ ಸಿಕ್ಕಿದಾಗ ಹೇಗಿದ್ದೀರಿ—ಎಂಬ ಪ್ರಶ್ನೆಗೆ ಉತ್ತರವಾಗಿ ಚೆನ್ನಾಗಿದ್ದೇನೆ. ಆದರೆ, ಅದೇನ್ರೀ ನೀವು ಕುಡಿಸಿದ್ದು ನಿನ್ನೆ ರಾತ್ರಿ ಎಂದು ಕೇಳಿದ.

ವೈದ್ಯನು, ನೋಡಯ್ಯಾ ಮನೆಯಲ್ಲಿ ಏನೂ ಔಷಧಿ ಇಡುವುದಿಲ್ಲ. ನನಗೂ ಸ್ವಲ್ಪ ಮೈ ಕೈ ಇರುಸು ಮುರುಸಾಗಿತ್ತು. ನಮ್ಮ ಅತ್ತೆಮ್ಮನವರು ಕಷಾಯ ಹಾಕಿ ಕೊಟ್ಟಿದ್ದರು. ಅದನ್ನು ಕುಡಿಯುವ ವೇಳೆಗೆ ನಿಮ್ಮ ಕರೆ ಬಂತು. ಕುಡಿಯದೆ ಬಂದೆ, ಅದನ್ನೇ ನಿಮಗೆ ಕಳುಹಿಸಿದೆ. ಇಷ್ಟು ಬೇಗ ವಾಸಿಯಾಗಿರುವುದನ್ನು ನೋಡಿದರೆ ಆಯುರ್ವೇದವೇ ಸರಿಯಾದ ಚಿಕಿತ್ಸೆ ಎಂದು ಕಾಣುತ್ತದೆ.

ಸ್ವಾಮಿ—ನೀವು ತಪ್ಪಿಸಿಕೊಂಡಿರಿ, ಈಗಲೂ ನನ್ನ ಗಂಟಲು ಗಾರೆ ಅರೆದ ಹಾಗಿದೆ—ನಾಲಿಗೆ ಪಾಪಾಸ ತಳದಂತಿದೆ. ಕುದುರೆ ಕಷಾಯಾರೀ ಅದು—ಎಂದು ಹೇಳಿ ಹೊರಟ.



"ಏನ್ರಿ ಮಿಸ್ಟರ್, ಎರಡು ಕೈಯಲ್ಲೂ ಇಷ್ಟು ಉಗುರು ಬಿಟ್ಟಿದ್ದೀರಲ್ಲ. ಏನು ವೀಣೆ ಗೀಣೆ ಬಾರಿಸೋದಕ್ಕೆ ಉಪಯೋಗವಾಗುತ್ತೆಂತಲೋ"

"ಇಲ್ಲ. ವೀಣೆ ಗೀಣೆ ಬಾರಿಸುವವರ ಮೇಲೆ ಉಪಯೋಗಿಸಬಹುದುಂತಾ."

ಪಾಣಿ-ಗ್ರಹಣ

ವಧೂವರರು ಪಾಣಿಗ್ರಹಣ ಮಾಡಿಕೊಳ್ಳಲಿ! ಆದರೆ, ಅವರಂತೆ, ಸ್ನೇಹಿತರೂ, ಪರಿಚಿತರೂ, ಪರಸ್ಪರ ಪರಿಚಯಾಭಿಲಾಷಿಗಳೂ ಪಾಣಿಗ್ರಹಣ ಮಾಡಿಕೊಳ್ಳುತ್ತಿರುವುದೇ ಅಸಹ್ಯ! ಪರದೇಶೀ ನಾಗರಿಕತೆಯ ದುಷ್ಫಲ—ಎಂದು ಶಾಸ್ತ್ರಿಗಳು ಮೊನ್ನೆ ವಾದಿಸಿದರು. ನಾನು ಹೇಳಿದೆ, “ಶಾಸ್ತ್ರಿಗಳೇ! ನಿಮ್ಮಹಾಗೆ ದೂರದಿಂದಲೇ ಕೈಜೋಡಿಸಿ ನಮಸ್ಕಾರ ಮಾಡುವುದು ಭಯ ಭಕ್ತಿ ಮಿಶ್ರವಾದ ಗೌರವದ ಸೂಚನೆಯೇ ಹೊರತು, ಗೆಳೆತನದ ಗುರುತಲ್ಲ; ಸಮಾನಸ್ಕಂಧರೊಂದಿಗೆ ವರ್ತಿಸಬೇಕಾದ ರೀತಿಯಲ್ಲ; ಸಮಾನತೆ ಸ್ಥಾಪಿಸುವುದಕ್ಕೂ ಅದು ಸಹಕಾರಿಯಲ್ಲ. ಚರ್ಮವ್ಯಾಧಿಯ ಅನುಮಾನವೂ ಕೂಡ ಅದರಲ್ಲಿ ಅಡಕವಾಗಿದೆ. ಜಾತಿ, ಮತ, ಅಸ್ಪೃಶ್ಯತೆ, ಸೂತಕಪುರುಡಾದಿಗಳ ಶಂಕೆ ಇವೆಲ್ಲವೂ ಅದರಲ್ಲಿ ಧ್ವನಿಗೊಡುತ್ತವೆ. ದೂರದಿಂದಲೇ ಕೈ ಮುಗಿದರೆ, ಸ್ನೇಹದ ಕತೆ ಮುಗಿದಂತೆಯೇ. ನೋಡಿ, ಶಾಸ್ತ್ರಿಗಳೇ, ಸಲಾಂ ಹಾಕುವುದು, ಸೊಂಟ ಬಗ್ಗಿಸುವುದು, ಟೋಪಿ ತೆಗೆಯುವುದು, ನೆಲಕ್ಕೆ ದಂಡವಾಗಿ ಬೀಳುವುದು ಇವೆಲ್ಲ ಕೇವಲ ಭಕ್ತಿಸೂಚಕ. ವ್ಯಕ್ತಿಗೂ ವ್ಯಕ್ತಿಗೂ ಇರುವ ಅಂತರವನ್ನೂ, ಆದರವನ್ನೂ, ಪೂಜ್ಯತೆಯನ್ನೂ ವ್ಯಕ್ತಪಡಿಸುವ ವಿಧಾನಗಳು. ಆದರೆ, ಇಲ್ಲಿ ಕೇಳಿ ಶಾಸ್ತ್ರಿಗಳೇ! ನಾವು ಒಬ್ಬರ ಕೈ ಹಿಡಿದು ಕುಲುಕಿದರೆ,—ಅದೇ ಸಮಯದಲ್ಲಿ ಅಷ್ಟೇ ರಭಸದಿಂದ ಅವರೂ ನಮ್ಮ ಕೈಯನ್ನು ಕುಲುಕಿದರೆ—ಸ್ನೇಹ ಅನ್ನೋದು, ಶಾಸ್ತ್ರಿಗಳೇ, ಸ್ನೇಹ ಅನ್ನೋದು ಕೈಯಿಂದ ಕೈಗೆ ಹರಡುವುದಿಲ್ಲವೇ? ಹೀಗೆ ಕೈ ಕೈ ಮಿಲಾಯಿಸದೆ, ಸುಮ್ಮನೆ ನಿಂತು ಇಬ್ಬರು ನಿಂತು ಮಾತನಾಡಿದರೆ, ಉಪ್ಪಿಲ್ಲದೆ ಸಾರು ಮಾಡಿದ ಹಾಗೆ; ರುಜು ಹಾಕದೆ ಕಾಗದ ಬರೆದ ಹಾಗೆ; ಹಲಸಿನ ಹಣ್ಣಲ್ಲಿ ಬರೀ ಬೀಜವೇ ಇದ್ದ ಹಾಗೆ! ಅವರ ಸರಸವೆಲ್ಲ ಸವತಿಯ ಮುದ್ದಾಟದಂತೆ! ದೇವರು ಕೊಟ್ಟ ಕೈಯನ್ನ ಮುಂದಕ್ಕೆ ನೀಡದೆ, ಪಕ್ಕದಲ್ಲೇ ನೇತಾಡಿಸಿದರೆ, ದೇವರಿಗೆ ದ್ರೋಹ ಮಾಡಿದ ಹಾಗೆ. ನಮ್ಮ ನಾಲಿಗೆ ಎಷ್ಟು ನಯವಾಗಿದ್ದರೆ ಏನು? ನುಡಿ ಎಷ್ಟು ಕಿಡಿರಹಿತವಾಗಿದ್ದರೇನು? ಕೈ ತೋರಿಸಿ ಅವಲಕ್ಷಣ ಅನ್ನಿಸಿಕೊಳ್ಳಬೇಡವೇ? ಅವೂ ಕೂಡ ನಾವು ಮಾತನಾಡುವಾಗ ಸುಮ್ಮನೆ ಪಕ್ಕದಲ್ಲೇ ಜೋಲು ಬಿದ್ದಿರುವುದಿಲ್ಲ; ಬೇಕಾದರೆ ನೋಡಿ. ನಮ್ಮ ಎದೆಯ ಮೇಲೆ ಬಿದ್ದು ಬಡಿದುಕೊಳ್ಳುತ್ತವೆ. ಕಿಸೆಯೊಳಕ್ಕೆ ಹೋಗುತ್ತವೆ. ಬೆನ್ನ ಹಿಂದೆ ಬಗ್ಗಿ ನೋಡುತ್ತವೆ. ಗುಂಡಿಗಳನ್ನು ಕೀಳುತ್ತವೆ. ಕಿವಿ ಹಿಡಿದೆಳೆಯುತ್ತವೆ. ಅವುಗಳಿಗೂ ಆತುರ! ಎದುರಿಗೆ ನೇತಾಡುತ್ತಿರುವ ಕೈಗಳನ್ನು ಹಿಡಿದು ಕುಲುಕಬೇಕು ಅಂತ.

ಅದೂ ಅಲ್ಲದೆ, ಶಾಸ್ತ್ರಿಗಳೇ! ಒಬ್ಬನ ಕೈಹಿಡಿದು ಕುಲುಕಿದರೆ ಆ ಕೈಯ್ಯು

ಪುಷ್ಟಿ, ಶಕ್ತಿ, ಕಾವು, ತಂಪು ಇದನ್ನು ಹಿಡಿದು ಕುಲುಕುವಾಗ ಆತನ ಮುಖ ಭಂಗಿ ಇವುಗಳಿಂದಲೇ ನಾವು ಆತನ ಭುಜಬಲ ಇವುಗಳನ್ನು ಕಂಡುಕೊಳ್ಳಬಹುದು. ಹಾಗೆಯೇ, ಕುಲುಕಾಟದಲ್ಲಿ ಆತ ನಮ್ಮೊಂದಿಗೆ ಎಷ್ಟು ಸಹಕರಿಸುತ್ತಾನೆ, ಅವನ ಕೈಯೇ ಮೇಲೆಂದು ಸಾಧಿಸುತ್ತಾನೋ ಅಥವಾ ನಮ್ಮ ಕೈ ಮೇಲಾಗಲು ಒಪ್ಪುತ್ತಾನೋ, ಆತನ ಮುಖದಲ್ಲಿ ಕಂಡುಬರುವ ಸಂದೇಹ, ಸಂತೋಷ, ಅಸಹ್ಯ, ಅನುಮಾನ ಇವುಗಳಿಂದ ನಾವು ಆತನ ಸ್ನೇಹ ಸೌಹಾರ್ದಗಳನ್ನು ಅಳತೆ ಮಾಡಬಹುದು, ಶಾಸ್ತ್ರಿಗಳೇ! ಚಿಕ್ಕಂದಿನಲ್ಲಿ ನಾವು ಚೂಡಾರತ್ನನಿಗೆ ಹೇಳುತ್ತಿದ್ದ ಹಾಗೆ, ಮರಗೈಗಳೂ ಇವೆ, ಮರುಳ್ ಗೈಗಳೂ ಇವೆ. ನರಗೈಗಳೂ ಇವೆ. ನರವಿಲ್ಲದ ಕೈಗಳೂ ಇವೆ, ಒಪ್ಪಿದೆ. ಆದರೂ, ಹಿತವಾಗಿ ಮಿತವಾಗಿ, ಇಲ್ಲಿ ಕೇಳಿ ಶಾಸ್ತ್ರಿಗಳೇ, ಹಿತವಾಗಿ ಮಿತವಾಗಿ ಕೈಕುಲುಕುವುದು ಕೆಟ್ಟದ್ದಲ್ಲ; ಒಳ್ಳೇದು. ನೀವು ಏನೇ ಹೇಳಿ, "ನಮೋನ್ನಮಃ" ಎಂಬ ವಾಣಿಗ್ರಹಣಕ್ಕಿಂತ, ಪಾಣಿಗ್ರಹಣ ಎಷ್ಟೋ ವಾಸಿ.

—ಬಿದಿರೆ.

ನಮೋರಂಜಕ

"ಒಂದು ಪಂಚೇರು ಸಕ್ಕರೆ ಬೇಕಾಯಿತಲ್ಲ, ಸಾಹುಕಾರರೇ! ಅರ್ಜೆಂಟಾಗಿ! ಅಳಿಯ ಆಗಮಿಸಿದಾನೆ. ಆತನಿಗೆ ಬಾಯಿಗೆ ರುಚಿ ತಗುಲಬೇಕಾದರೆ, ಬಾದಾಮಿ ಬರ್ಫಿ ಬಿಟ್ಟು ಬೇರೆ ಯಾವುದೂ ಸಾಲದಂತೆ........" ಅಂದೆ ಅಂಗಡಿ ಮಾಲೀಕರು ನನ್ನ ಕಡೆ ತಿರುಗಿ ನೋಡಲೇ ಇಲ್ಲ. ತಮ್ಮ ಎದುರು ಕುಳಿತು ಕೆನ್ನೆ ಕೆರೆಯುತ್ತಿದ್ದ ಮತ್ತೊಬ್ಬರೊಂದಿಗೆ ಮಾತು ತೆಗಿದರು. "ಕಯ್ಯೊ! ಕಯ್ಯೊ! ಕಳಿಯನಿಗೆ ಕೊಂದು ಬಾದಾಮಿ........" ಎಂದು ಅಪಶಕುನ ನುಡಿದಾಗ, ನನಗೆ ಕಾವೇರಿತು. ಆಗ ಅವರ ಸ್ನೇಹಿತರು "ದಮುವೆ ಲಾಕಲದ್ದಿ ತಿಕ್ಕು ತಿಕ್ಕು ಚೋದಿದ್ದು ದಾಸಲೆ, ದಾಬಾಮಿ .....ಸಕ್ಕುಲಕ್ಕರೆ ....ಪೇನುಜುತ್ತ........" ಅಂತ ನಗುನಗುತ್ತಾ ಒದರಿದರು. ನನಗೆ ಆಶ್ಚರ್ಯವಾಯಿತು. ಯಾವ ಹಾಳು ಭಾಷೆ ಇದು? ಯಾವ ರಾಯನ ಕಾಲದ್ದು? ಯಾವ ಪಿತೂರಿ? ಯಾವ ಠಕ್ಕು? "ಸ್ವಾಮಿ! ಸಕ್ಕರೆ!" ಅಂದೆ. ಅವರು ನನ್ನ ಕಡೆ ಗಮನಿಸಲೇ ಇಲ್ಲ. "ಲಾಕಲದ್ದಿ ಅಂದರೆ, ತೆಲುಗಿರಬಹುದೆ?" ಅಂತ ನಾನು ನನ್ನ ತೆಲುಗನ್ನೆಲ್ಲ ತಲೆಯೊಳಗೆ

ತಿರುವಿಹಾಕಿದೆ. ಸಿಗಲಿಲ್ಲ. ಅಷ್ಟುಹೊತ್ತಿಗೆ, ಅಂಗಡಿ ಮಾಲೀಕರು ತಮ್ಮ ಸ್ನೇಹಿತರ ಭುಜ ತಟ್ಟುತ್ತಾ "ಪೇಲ್ಲದಿಳೋ ಹೇದು ಎಂಳಹಾನೆಮ?" ಅಂದರು. "ಸಾಹುಕಾರರೇ! ನಿಮ್ಮ ಅಂಗಡಿ ಸಕ್ಕರೆ ತಿನ್ನುವುದಕ್ಕೆ ನನಗೆ ಗಾಬರಿಯಾಗುತ್ತಿದೆ" ಅಂತ ಹೇಳಿ ನಾನು ಎದ್ದೆ. ಅವರು ನನ್ನನ್ನ ರಟ್ಟೆಹಿಡಿದೆಳೆದು, "ಡೂಕ್ರಿ, ಡೂಕ್ರಿ" ಅಂದರು. "ಏನ್ರಿ ಇದು? ಹಾಳು ವ್ಯಾಧಿ? ನಿನ್ನೆ ಸಂಜೆ ಕೂಡ ಚೆನ್ನಾಗಿದ್ದರಲ್ಲಾ! ಅಮಾವಾಸ್ಯೆಗಿನ್ನೂ ಒಂದು ವಾರ ಇದೆ" ಅಂದೆ. ಆಗ ಆವರು, "ಧ್ಯಾವಿ? ರಾಯಿಗೆ ಧ್ಯಾವಿ? ವಾನು ನವೋರಂಜಕ ತೀರ್ಯಾ ತಾಮಡಾನುತ್ತಿವೀದಿ" ಅಂದರು. ಆಗ ನನ್ನ ತಲೆಯೊಳಗೆ ಕೊಂಚ ಬೆಳಕು ಹರಿಯಿತು. ನವೋರಂಜಕ? ಎಲ್ಲೋ ಅಂತಹ ಹೆಸರು ಕೇಳಿದೀನಿ. ಮಕ್ಕಳ ಭಾಷಾ ಪರಿಜ್ಞಾನವನ್ನು ಬೆಳೆಸಿ ತಿದ್ದಿ ಪರಿಷ್ಕರಿಸಲು ಪ್ರಯತ್ನಿಸುವ ಹೊಸ ರೀತಿಯ ಉತ್ತಮ ಗ್ರಂಥಗಳು.

"ಹೌದು, ಸಾಹುಕಾರರೇ! ನಾನೂ ಎಲ್ಲೋ ಕೇಳಿದೇನೆ!" ಅಂದೆ.

"ಮನ್ನ ನಮೆ ಗುಡುಹರು"

ಅಂದ್ರೆ, ನಮ್ಮ ಮನೆ ಹೈಕಳು

"ಕುಸ್ತುಪ ದಂತರು"

ಪುಸ್ತಕ ತಂದರು........ಅದನ್ನ ನೀವು ಯಾಕೆ ನೋಡಬೇಕಾಯಿತು?

ಡೇಗ ಬೇರಿ! ಡೇಗ ಬೇರಿ!

ಇಲ್ಲ. ರೇಗೋದಿಲ್ಲ..........ಹೇಳಿ. ಹುಡುಗರ ಪುಸ್ತಕಕ್ಕೂ ನಿಮ್ಮ ಈ ಚರ್ಯೆಗೂ ಏನು ಸಂಬಂಧ, ಅಂತ........

ನೊಕೇಟುಪಾ ಡೋಸಿದೆ

ಅಲ್ಲೇನಿತ್ತು?

ನಾವು ತರ್ವಕರು ಟುಗ್ಗಾಗಿ ತಾಮಡಾನುವಾಗ ಕಕಕಕ ಗೋಹೋರಾಬೋ ಮಾಸಾನು ಕಿಸ್ನುವುದಿಲ್ಲ..........ಗೀಹೆ, ಗೀಹೆ, ತಾನುಡಾನು........

ಓಹೋ! ಆ ಪುಸ್ತಕದಲ್ಲಿ ಬರೆದಿರುವುದು ಎಲ್ಲಿ ಸುಳ್ಳಾಗಿಬಿಡುತ್ತೋ ಎಂಬ ಭೀತಿಗಾಗಿ ನೀವು ಹೀಗೆ ಪ್ರಾರಂಭಿಸಿದೀರಾ?

ಹುಂ. ಕೇಲಪೋತೆ ಮನ್ನ ಡುಹುಗರಿಗೆ ಕುಸ್ತುಪ ಅಂದರೆ ಬಂಕಿನೆ ಗೋಹುತ್ತೆ.

ಚೆನ್ನಾಯಿತು. ಅವರ ನಂಬಿಕೆ ಉಳಿಸುವುದಕ್ಕೆ ಹೋಗಿ, ನೀವು ನಿಮ್ಮ ಗಿರಾಕಿಗಳ ನಂಬಿಕೆ ಕಳೆದುಕೊಂಡು ಬಿಡ್ತೀರಲ್ಲಾ........ವರ್ತಕರು ನೀವು ನೀವು ಹೇಗೆ ಬೇಕಾದರೂ ಆಡಿಕೊಳ್ಳಿ........ನಮ್ಮ ಮೇಲೆ ಯಾಕೆ ಈ ಪುಸ್ತಕಪ್ರಯೋಗ?

ವರ್ತಕರು ತಾವ್ರುವೇ ಅಲ್ಲ. ಚಾರಕಾರ್ಯದವರೂ ಗೀಹೇ, ಚಾರಕಾರ್ಯದವರು ಗುಟ್ಟಾಗಿಯೇ ಮಾತನಾಡಬೇಕು. ಅದು ಸಹಜವಾಗಿಯೇ ಇದೆ

ಸಾಹಲ್ಲ........ಚಾರಕಾರ್ಯ ಅಂದರೆ ನೀವೂನೂ ಚಾರಕಾರ್ಯ. ನಿಮ್ಮದು ಸರ್ಕಾರಿ ಕಾಚರಿ ತಾನೆ?

ಅಂದರೆ, ಸರ್ಕಾರಿ ಚಾಕರೀನೋ ಅಂತ ತಾನೆ ನೀವು ಕೇಳೋದು?

ಹುಂ.

ಹೌದು. ಸರ್ಕಾರಿ ಚಾಕರೀನೇ.

ಗಾಹಾದ್ರೆ ನೀನೂ ಚಾರಕಾರ್ಯವೇ

ಏನ್ರಿ? ಮತ್ತಗೆ ನನ್ನನ್ನೇ ಬೈಯುವುದಕ್ಕೆ ಪ್ರಾರಂಭಿಸಿಬಿಟ್ಟಿರಿ ನೀವು. ಸಕ್ಕರೆಗೆ ಸೊನ್ನೆ! ಸರ್ಕಾರಿ ಚಾಕರಿಗೂ ಸಹಸ್ರನಾಮ.

ರೇಗಿತು. ಅಲ್ಲಿಂದ ಎದ್ದೆ. "ಕನಸ್ಕಾರ, ಕನಸ್ಕಾರ" ಅಂದರು ಇಬ್ಬರೂ.

"ನಿಮಗೆ ಅಪಸ್ಮಾರ ಬರಲಿ" ಅಂತ ಮನದಲ್ಲೇ ಆಶೀರ್ವದಿಸಿದೆ.

ಮನೆಗೆ ಹೋಗಿ ಮೂರನೆಯವನ ಮೇಜಿ ಮೇಲಿಂದ ನವೋರಂಜಕ ಪುಸ್ತಕ ತೆಗೆದು, ಕೊನೆಯ ಪುಟ ತೆಗೆದು ಓದಿದೆ. ಹುಡುಗರ ಆಟಕ್ಕೆ ಅಂತ ಅವರು ಏನೋ ಬರೆದರೆ, ಈ ಸಾಹುಕಾರರುಗಳು ಅದನ್ನೇ ಉರುಹೊಡೆದು ಹುಚ್ಚಾಸ್ಪತ್ರೆಗೆ ಸಿದ್ಧರಾಗುತ್ತಿದ್ದರಲ್ಲಾ ಅಂತ ಮೂಗಿನ ತುದಿಯ ಮೇಲೆ ಬೆರಳಿಟ್ಟೆ. ಅಳಿಯನಿಗೂ ಹೇಳಿದೆ.

——o——

ಸರ್ಕಾರಿ ಕೆಲಸದಿಂದ ನಿವೃತ್ತರಾದವರ ಪೈಕಿ ಹಲಕೆಲವರು ಲಾಲ್‌ಬಾಗಿನಲ್ಲಿ ಇನ್ನೂ ಕಾಣಿಸುತ್ತಿರುವರಂತೆ. ಉತ್ತರ ದೇಶದ ಸಂಸ್ಥಾನಗಳಿಗೆ ಈ ಸುದ್ದಿ ಗೊತ್ತಾಗದೆ ಇರುವುದೇ ವಾಸಿ.

*   *

ಪಿಕ್‌ಪಾಕೆಟ್‌ರ ಹಾವಳಿ ಹೆಚ್ಚುತ್ತಿದೆಯಂತೆ. ಅದಕ್ಕೋಸ್ಕರವೇ ಇರಬೇಕು ನನ್ನ ದರ್ಜಿಯವನು ಷರ್ಟಿಗೆ ಜೋಬು ಹೊಲೆಯದಿರುವುದು.

ಆಸಪ್ಪನ ಕತೆಗಳು

ಹಾಸ್ಯಪ್ರವೀಣನೊಬ್ಬನು ಒಮ್ಮೆ ತನ್ನ ಅನುಯಾಯಿಯೊಂದಿಗೆ ಮಾತನಾಡುತ್ತಿದ್ದಾಗ, "ಮುಂದಿನ ವಾರದ ಹೊತ್ತಿಗೆ ಒಂದು ಹಾಸ್ಯದ ಚುಟುಕಿ ಬೇಕು" ಯಾವುದಾದರೂ ಒಂದು ಗಾದೆ ಹೇಳು ಎಂದನು.

ಸ್ವಲ್ಪ ಹೊತ್ತು ಯೋಚಿಸಿ ಅವನ ಜೊತೆಗಾರನು "ಬೆಳ್ಳಗಿರುವುದೆಲ್ಲಾ....." ಎನ್ನುವ ವೇಳೆಗೆ ಹಾಸ್ಯ ಪ್ರವೀಣನು, "ಛೀ, ಛೀ ಆ ಗಾದೆಯನ್ನು ತಿರುಗಿಮರುಗ ಉಪಯೋಗಿಸಿ ಆಯಿತು, ಇನ್ನಾವುದಾದರೂ ಹೇಳು" ಎಂದನು

ಸ್ವಲ್ಪ ಹೊತ್ತು ಆಯಿತು. ಜತೆಗಾರನು "ಮರಳಿಯತ್ನವ ಮಾಡು" ಎಂದನು. ಅದು ಗಾದೆಯಲ್ಲವಲ್ಲ ಎಂದನು ಹಾಸ್ಯಪ್ರವೀಣ. "ಆದರೂ, ಅದು ಗಾದೆಯಂತಹ ವಚನ ನಮಗೆ ಸಾಕು" ಎಂದನು ಜತೆಗಾರ. ನಮ್ಮ ಓದುಗರಿಗಾದರೂ ಅದು ತಿಳಿಯುವುದಿಲ್ಲ ಎಂದನು ಜತೆಗಾರ. ಹೋಗಲಿ ಬಿಡು, "ಅನ್ಯಾಯಾರ್ಜಿತಂ ವಿತ್ತಂ".

"ತ್ಸು ತ್ಸು, ಅದು ಬಲು ದೊಡ್ಡದು. ಅಷ್ಟು ದೊಡ್ಡ ವಚನ ಯಾರೂ ಪೂರ್ತಿ ಓದುವುದಿಲ್ಲ."

"ರೂಪಾಯಿ ಭಂಗಿಸಿದವನಾ ಸಿಪಾಯಿ"

"ರೂಪಾಯಿ, ಕುಪಾಯಿ, ಮುಪಾಯಿ, ಬುಪಾಯಿ, ಉಪಾಯಿ, ಉಹ್ಞು, ಇದಕ್ಕೆ ಸರಿಯಾದ ಮಾತೇ ಇಲ್ಲ."

ಹೋಗಲಿ ಬಿಡು, ಎಂದು ಹಳೆಯ ಕೊರವಂಜಿಯೊಂದನ್ನು ತೆಗೆದು ಅದರಲ್ಲಿದ್ದ ಹಾಸ್ಯದ ಚುಟುಕಿಯೊಂದನ್ನು ಉಪಯೋಗಿಸಿಕೊಂಡನು.

—ಹಾಸ್ಯಗಾರರು ಕಷ್ಟಪಡುವುದಿಲ್ಲ ಎಂಬುದಕ್ಕೆ ಇದು ಕೊಡಲಿ ಪೆಟ್ಟಲ್ಲವೆ?

* * *

ಹಿಟ್ಲರನೂ—ಸೇನಾನಿ—ಪ್ರಧಾನಿ

ಹಿಟ್ಲರನೊಮ್ಮೆ ರಾಜಾಸ್ಥಾನದಲ್ಲಿ ಕುಳಿತಿದ್ದಾಗ ಸೇನಾನಿಯು ಬಂದು, "ಮಹಾಪ್ರಭೋ ಶತ್ರು ನಿರ್ನಾಮವಾದಂತೆಯೇ—ತಪ್ಪಿಸಿಕೊಂಡು ಓಡಿಹೋದವರನ್ನು ಕೈ ಬೆರಳುಗಳ ಮೇಲೆ ಎಣಿಸಬಹುದು" ಎಂದನು.

ಹಿಟ್ಲರನ ನಿರಾಶೆಯು ನಿಮಿರಿ ನಿಂತಿತು, ಹುಬ್ಬುಗಳು ಗಂಗುರಿಸಿದುವು, ಕೋಪ ಭಂಗಿಯು ಮುಖದ ಮೇಲೆ ತಾಂಡವವಾಡಿತು.

ಪ್ರಧಾನಿಗೆ ಮೆಲ್ಲಗೆ ಉಸುರಿದನು. "ಕೈ ಬೆರಳುಗಳ ಮೇಲೆ ಎಣಿಸದೆಯೇ ಬೇರೆಯ ತರಹ ಎಣಿಸಲಾದೀತೆ" ಎಂದು.

ಪ್ರಧಾನಿಯು ಈ ಬಿಕ್ಕಟ್ಟನ್ನು ಪರಿಹರಿಸಲಾರದೆ, ಹಾಗೆಯೇ ಮೂರ್ಛೆ ಹೋದನು. ತುದಿಗಣ್ಣಿನಿಂದ ಹಿಟ್ಲರನನ್ನೇ ನೋಡಿದನು. ಹಿಟ್ಲರನು ಸಿಂಹಾಸನದ ಕೈಮೇಲೆ ತನ್ನ ತೋಳನ್ನಿಟ್ಟು ಎರಡೂ ಕೈಬೆರಳುಗಳನ್ನು ಎಣಿಸುತ್ತಿದ್ದನು.

—ಸೇನಾನಿಯು ಹೇಳಿದ್ದು ಸುಳ್ಳಾದರೂ, ಈ ಕತೆಗೂ ಅದಕ್ಕೂ ಏನೂ ಸಂಬಂಧವಿಲ್ಲ.

* * *

ಸೈನ್ಯ—ಆಹಾರ ಸರಬರಾಜು—ನೌಕರನು ಮತ್ತು ಸೆರೆಮನೆ
ಸರದಾರ—ಸಂಗೀತಗಾರ—ಮತ್ತು ಕತೆ

ಸರದಾರನಿಗೆ ಸಂಗೀತದಲ್ಲಿ ಅಭಿರುಚಿ ಹುಟ್ಟಿಸಲೋಸುಗ ಹಾಡುವವನು "ಮಹಾಸ್ವಾಮಿ, ಈ ಹಾಡನ್ನು ಬರೆದವನು, ತಾನು ತನ್ನ ಪ್ರೇಯಸಿಯನ್ನು ಸಿಪಾಯಿಗಳು ಒಯ್ದಾಗ ಬರೆದನು. ಸಿಪಾಯಿಗಳಾದರೂ ಈ ಹಾಡನ್ನು ಕೇಳಲಾರದೆ, ಪ್ರೇಯಸಿಯನ್ನು ಹಿಂದಕ್ಕೆ ತಂದು ಬಿಟ್ಟರು" ಎಂದು ಹೇಳಿದನು.

"ಪ್ರೇಯಸಿಯು ಲಕ್ಷಣವಾಗಿದ್ದಳೇ" ಎಂದನು ಸರದಾರ.

"ಬಹಳ" ಎಂದನು ಹಾಡುಗಾರ.

"ಹಾಗಾದರೆ, ಇನ್ನೊಮ್ಮೆ ಆ ಹಾಡು ಹಾಡಿ" ಎಂದನು ಸರದಾರ.

ಆ ಹಾಡನ್ನು ಹಾಡಿದರು. ಈ ಬಾರಿ ಸರದಾರನು ಬಹಳ ಅಭಿರುಚಿಯನ್ನು ತೋರಿಸಿ, ಕೈ ಕೈ ಚಪ್ಪಾಳೆ ಹೊಡೆದನು.

ಹಾಡುಗಾರನಿಗೆ ಇನ್ನೂ ಸಂಶಯ.

"ಮಹಾಸ್ವಾಮಿ, ಮೊದಲು ಹಾಡಿದಾಗ ನೀವು ಚಪ್ಪಾಳೆ ತಟ್ಟಲಿಲ್ಲ, ಕತೆ ಹೇಳಿದ ಮೇಲೆ ಕೈ ಕೈ ಚಪ್ಪಾಳೆ ಹೊಡೆದು ನಿಮ್ಮ ಸಂತೋಷವನ್ನು ವ್ಯಕ್ತಪಡಿಸಿದಿರಿ. ಆ ಕತೆ ನಾನು ಹೇಳಿದುದರಿಂದ ಈ ವ್ಯತ್ಯಾಸವಾಗಿರಲಾರದು" ಎಂದನು.

“ಹಾಗಾದರೆ, ಆ ಕತೆಯನ್ನೇಕೆ ಹೇಳಿದೆ” ಎಂದು ಸರದಾರನೆಂದಾಗ, ಹಾಡುಗಾರನು ಬಾಯಿ ಮುಚ್ಚಿದನು.

* * *

ಕತೆಯೇನೂ ಬೇಡ—ಶಿರೋನಾಮವೇ ಸಾಕು.

—o—

ದಿನಾಗ್ಲೂ ಹರಿಕಥೆ

“ಕೇಷ”

ನಂಗೆ ಹರಿಕಥೆ ಅಂದ್ರೆ ಬಹಳ ಇಷ್ಟ. ನನಗೇ ಏನು, ನಮ್ಮಿಬ್ಬರಿಗೂ ಅಷ್ಟೆ. ನಾವಿರೋ ಮನೆಯ ಹತ್ತಿರ ರಾಮ ದೇವರ ದೇವಸ್ಥಾನದ ಮಂಟಪದಲ್ಲಿ ಹಬ್ಬಗಳ ಸಾಲು ಬಂತೂ ಅಂದ್ರೆ—ಸರಿ ಹರಿಕಥೆಗಳಿಗೆ ಕೇಳಬೇಕಾದ್ದೇ ಇಲ್ಲ. ರಾಮ ನವಮಿ, ಗಣೇಶ, ನವರಾತ್ರಿ ಅಂಥಾ ದೊಡ್ಡ ದೊಡ್ಡ ಹಬ್ಬಗಳಲ್ಲಂತೂ—ದಿನಾಗ್ಲೂ ಹರಿಕಥೆ ಒಂದು ಐದಾರು ದಿನಗಳು. ಆ ದಿನಗಳಲ್ಲಿ ನಾನು ಆಫೀಸಿನಿಂದ ಬಂದ ಕೂಡ್ಲೆ—“ನೋಡೀಂದ್ರೆ, ಇವತ್ತು........ದಾಸರದು ಹರಿಕಥೆ. ....ಪರಿಣಯ ವಂತೆ, ಬೇಗೇಳಿ” ಅಂತ ಅವಸರವೇ ಅವಸರ. ಮನೇಲಿ ಈ ಹರಿಕಥೆಗಳ ಕಾಲ ಬಂತೂ ಅಂದ್ರೆ, ಮನೇಲಿ ರಾತ್ರೀಗೆ ತಂಗಳೂಟವೇ ಗತಿ. “ಇವತ್ತು ಬೆಳಗ್ಗೆ ಮಾಡಿದ ಅಡಿಗೇನೇ ಬೇಕಾದಷ್ಟು ಮಿಕ್ಕಿದೆ. ಅಡಿಗೇನೇ ಮಾಡಬೇಕಾಗಿಲ್ಲ” ಅಂತ ಧೈರ್ಯ ಕೊಟ್ಟು, ಅವಸರದಲ್ಲಿ ಒಂದ್ಲೋಟ ಕಾಫಿನೂ ನನ್ನ ಕೈಲಿಟ್ಟು ಪಕ್ಕದ ಮನೆ ನಾಗಮ್ಮನೋರ ಹತ್ತಿರ ರಾತ್ರಿಗೆ ಸ್ವಲ್ಪ ಸಾರು ಜಾಸ್ತಿ ಮಾಡೋಕೆ ಹೇಳಿ ಬೀದೀ ಬಾಗಿಲ ಹತ್ತಿರ ಸಿದ್ಧ ಹೊರಡೋಕೆ—ಅವಳು. ನಾವು “ಕಿಸ್ಮತ್” ಸಿನಿಮಾಗೆ ಹೋದಾಗ್ಲೂ ಅಷ್ಟು ಅವಸರವಿರಲಿಲ್ಲ.

ನಂಗೆ ಹರಿಕಥೆ ಅಂದ್ರೇನೋ ಇಷ್ಟನೇ. ಅದರಲ್ಲೂ ಕೆಲವು ದಾಸರು ಮಧ್ಯದಲ್ಲಿ ಸ್ವಾರಸ್ಯವಾದ ಉಪಕಥೆಗಳನ್ನು ಹೇಳುತ್ತಾರಲ್ಲಾ—ನನಗದನ್ನು ಕೇಳೋಕೆ ಬಹಳ ಇಷ್ಟ. ಆದರೆ, ನಾಲಕ್ಕೈದು ದಿನ ಪರಂಪರವಾಗಿ ದಿನಾಗ್ಲೂ ಹರಿಕಥೆಗಳನ್ನು ಕೇಳಿಬಿಟ್ಟರೆ ನನಗೆ ಸಾಧಾರಣವಾಗಿ ಕಥೆಗಳು ಒಂದಕ್ಕೊಂದು

ಬೆರೆತುಹೋಗುವುದುಂಟು. ಹೀಗಾಗಿ ಒಂದು ಸಾರಿ ರಾಮಾಯಣದ ಕಥೆಯನ್ನೂ ಮಹಾಭಾರತದ ಕಥೆಯನ್ನೂ ಮರುದಿನಗಳಲ್ಲಿ ಕೇಳಿಬಿಟ್ಟು ನನಗೆ ಒಂದು ಸಂಶಯ ಹುಟ್ಟಿತ್ತು. ಅಲ್ಲಾ, ರಾಮನು ಜನಕರಾಜನ ಮಗಳನ್ನು ಲಗ್ನಮಾಡಿಕೊಂಡು ಮನೆಗೆ ಬಂದ ತಕ್ಷಣ ಅವನ ತಾಯಿ ಕುಂ ......ಅಯ್ಯೋ ಕುಂತಿಯಲ್ಲ—ಕೌಸಲ್ಯಾ ದೇವಿ "ನೀವ್ಯೆದು ಜನಾನೂ ಹಂಚಿಕೊಳ್ಳೀಪ್ಪಾ" ಅಂದಳಂತಲ್ಲಾ. ಆ ಐದು ಜನ ಯಾರೂಂತ? ಇದನ್ನು ಕೇಳುತ್ತಾನೇ ನಮ್ಮವಳು ತಲೆ ತಲೆ ಚಚ್ಚಿಕೊಂಡು "!.......?.......!........!?" ಅಂದಳು.

ನಂಗಾವತ್ತಿನಿಂದ ಚೆನ್ನಾಗಿ ಬುದ್ಧಿ ಬಂತು. ಈಗ ನಾನು ಹಾಗೆಲ್ಲಾ ಮರೆಯುವುದಿಲ್ಲ. ಹರಿಕಥೆಯಿಂದ ಹೊರಕ್ಕೆ ಬಂದಕೂಡ್ಲೆ ಮನೇ ಸೇರೋವರೆಗೂ ಕಥೆಯ ಮುಖ್ಯ ಅಂಶಗಳನ್ನೆಲ್ಲಾ ಜೋಡಿಸುವುದು—ಮನಸ್ಸಿನಲ್ಲಿ. ಹೀಗಾಗಿ ಆ ದಿನ ಕಥೆ ನನ್ನ ಮನಸ್ಸಿನಲ್ಲಿ ಚೆನ್ನಾಗಿ ನಾಟುತ್ತೆ.

ನೋಡಿ, ಮೊನ್ನೆ ಗಣೇಶನ ಹಬ್ಬದಲ್ಲಿ ನಾಲ್ಕು ಕಥೆಗಳು ನಡೆದವು

೧) ಭಕ್ತ ಪ್ರಹ್ಲಾದ   ೩) ಧ್ರುವ ವಿಜಯ

೨) ಸತ್ಯ ಹರಿಶ್ಚಂದ್ರ   ೪) ಸಾವಿತ್ರೀ ಕಥೆ

ಹಾಗೂ ಹೀಗೂ ಒಂದು ತಿಂಗಳಾಯಿತು—ಕಥೆಗಳು ನಡೆದು. ನನಗೆ ಈಗಲೂ ಚೆನ್ನಾಗಿ ಜ್ಞಾಪಕವಿದೆ. ಆದರೆ, ನಾನು ಹಿಂದೆ ಇದ್ದ ಹಾಗೆ ನೀವೂ ಸ್ವಲ್ಪ ....ಎಂದೇ ನನ್ನ ಅಭಿಪ್ರಾಯ. ಆದಕ್ಕಾಗಿಯೇ ನಾನು ಇದೆಲ್ಲಾ ಬರೆದು ನಿಮಗೆ ಹೇಳೋದು. ನಿಮಗೂ ಉಪಯೋಗವಾದರೆ ನನಗೆಷ್ಟೋ ಸಂತೋಷ. ಇಲ್ಲದಿದ್ದರೆ ನಮ್ಮ ಪವಿತ್ರವಾದ ಕಥೆಗಳನ್ನೇ ನಾವು ಅಲ್ಲೋಲ ಕಲ್ಲೋಲ ಮಾಡಿ ಕೊನೆಗೆ ಸಿನಿಮಾದಲ್ಲಿ ತೋರಿಸೋ ಪುರಾಣ ಕಥೆಗಳಿಗಿಂತ ಕಲಸುಮೇಲೋಗರ ಮಾಡುತ್ತೇವೆ. ಆದರೆ ಈಗ ನಾನು ಮಾಡುವ ಪ್ರಕಾರ ಎಲ್ಲರೂ ಮಾಡಿದರೆ ಎಷ್ಟು ಚೆನ್ನಾಗಿ ಕಥೆಗಳನ್ನು ಜ್ಞಾಪಕದಲ್ಲಿಟ್ಟುಕೊಳ್ಳಬಹುದು ಅಂತ ನಿಮಗೇ ತಿಳಿಯುತ್ತೆ. ಮೊನ್ನೆ ನಾನು ಕೇಳಿದ ಕಥೆಗಳನ್ನೇ ತೆಗೆದುಕೊಳ್ಳಿ. ನೀವೂ ಇದೆಲ್ಲಾ ಕೇಳಿದ್ದೀರಿ ಒಂದ್ಸಲ ಅಲ್ಲ ಒಂದ್ಸಲ. ಆದರೆ ನಿಮ್ಮಲ್ಲಿ ಎಷ್ಟು ಜನಕ್ಕೆ ಈ ಕಥೆಗಳೆಲ್ಲಾ ಜ್ಞಾಪಕವಿದೆ? ಅದಕ್ಕೇ ನಾನಿದೆಲ್ಲಾ ಹೇಳೋದು. ಬೇಕಾದರೆ ಆ ಕಥೆಗಳ ಸಾರಾಂಶವನ್ನೆಲ್ಲಾ ಹೇಳುತ್ತೇನೆ ನೋಡಿ.

೧. **ಪ್ರಹ್ಲಾದನ ಕಥೆ** – ಪ್ರಹ್ಲಾದನು ಒಬ್ಬ ವಿಷ್ಣು ಭಕ್ತ. ಆದರೆ ಇವನ ತಂದೆ—ಯಾರಪ್ಪಾ ಅದು........ಹೂ........ಹಿರಣ್ಯ ಕಶಿಪು, ಶಿವಭಕ್ತ. ಆದರೆ ಇವನ ತಮ್ಮನಾದ ಹಿರಣ್ಯಾಕ್ಷನ ಮಗನೇ ಪಟ್ಟಕ್ಕೆ ಬರಬೇಕೂಂತ ಅಣ್ಣ ತಮ್ಮಂದಿರಿಬ್ಬರಿಗೆ ಜಗಳವಾಗಿ ಕೊನೆಗೆ ವಿಷ್ಣುವು ಕಂಬದೊಳಗಿಂದ ಸಿಂಹದ ರೂಪವಾಗಿ ಬಂದು ದೊಡ್ಡವನಾದ ಹಿರಣ್ಯಕಶಿಪುವನ್ನು ಕೊಂದು ಪ್ರಹ್ಲಾದನಿಗೆ ಪಟ್ಟ ಕಟ್ಟಿ

ತ್ತಾನೆ. ಅದೂ ಅಲ್ಲದೆ, ಒಂದು ನಕ್ಷತ್ರವನ್ನು ಪ್ರತ್ಯೇಕವಾಗಿ ಅವನಿಗೆ ಕೊಟ್ಟು ಅವನ ರಾಜ್ಯದಲ್ಲಿ ಸದಾ ಬೆಳಕಿರಲೆಂದು ಹರಸುತ್ತಾನೆ. ಈಗಲೂ ಈ ನಕ್ಷತ್ರವನ್ನು ಸಪ್ತಋಷಿಮಂಡಲಕ್ಕೆ ನೇರವಾಗಿ ನೋಡಬಹುದು.

ನೀತಿ—ಜಗಳಗಳಲ್ಲಿ ಕಂಬದ ಹತ್ತಿರವಿದ್ದರೆ ಒಳ್ಳೆಯದು. ಸಿಂಹಕ್ಕೆ ಹೆದರಬಾರದು.

೨. **ಸತ್ಯಹರಿಶ್ಚಂದ್ರ**—ನಮ್ಮ ಪುರಾಣಗಳಲ್ಲೆಲ್ಲಾ ಹರಿಶ್ಚಂದ್ರನಂತಹ ಸತ್ಯವಂತರಿಲ್ಲ. ಇವನು ಸತ್ಯಕ್ಕಾಗಿ ಹೋರಾಡಿ, ಒಂದು ಪಂದ್ಯ ಕಟ್ಟಿ, ಆನೇ ಮೇಲೆ ನಿಂತು, ಒಂದು ಗಜ್ಜುಗವನ್ನು ಮೇಲಕ್ಕೆ ಎಸೆಯುತ್ತಾನೆ. ಇವನ ಮಗನಾದ........ಹೂ........ಮಗನಾದ........ಮಗನಿಗೆ ಪ್ರಾಯದಲ್ಲೇ ಮರಣವೆಂದು ಕೇಳಿ ಬಹಳ ಶೋಕಪಡುತ್ತಾನೆ. ಇಷ್ಟರಲ್ಲಿ ತಂದೆಗೆ ರಾಜ್ಯವೂ, ಕಣ್ಣುಗಳೂ ಎರಡೂ ಹೋಗಿ ಕಾಡಿನಲ್ಲಿ ವಾಸಮಾಡುತ್ತಾನೆ. ಆಗಲೂ ಸತ್ಯವನ್ನು ಬಿಡದೇ ಇದ್ದದ್ದಕ್ಕಾಗಿ ದೇವರು ಮೆಚ್ಚಿ—ಅವನ ಮಗನನ್ನು ಯಮಪಾಶದಿಂದ ತಪ್ಪಿಸಿ, ಅವನ ರಾಜ್ಯವನ್ನೂ ಕಣ್ಣುಗಳನ್ನೂ ಕರುಣಿಸುತ್ತಾನೆ.

ನೀತಿ :—ನಾವೇನು ತಪ್ಪುಮಾಡಿದರೂ ನಿಜ ಹೇಳಿಬಿಟ್ಟರೆ ಮಾಫ್ ಆಗಬೇಕು, ಕೋರ್ಟಿನಲ್ಲಿ ಕೂಡ.

೩. **ಧೃವನ ಕಥೆ**—ಧೃವನ ಕಥೆ ಅಂದರೆ ಚಿಕ್ಕಹುಡುಗರಿಗೂ ಗೊತ್ತಿದೆ ಆದರೆ ಇವನ ಕಥೆಯನ್ನು ಪ್ರಹ್ಲಾದನ ಕಥೆಗೆ ಬೆರೆಸಬಾರದು. ಧೃವನು ತನ್ನ ಎಂಟನೇ ವಯಸ್ಸಿನಲ್ಲಿಯೇ ದೇವರಲ್ಲಿ ಭಕ್ತಿಯಿಟ್ಟು, ಸದಾ ಹರೀ-ಹರೀ ಅಂತ ಧ್ಯಾನಮಾಡುತ್ತಿರಲು ಅವನ ತಂದೆ "ಎಲ್ಲೋ ನಿನ್ನ ಹರೀ? ತೋರಿಸೋ?" ಅಂತ ಗದರಿಸುತ್ತಾನೆ. ಆಗ ಧೃವನು ಕಾಡಿಗೆ ಹೋಗಿ ದೇವರನ್ನು ಹುಡುಕುತ್ತಾನೆ. ಕೊನೆಗೆ ಮಹಾವಿಷ್ಣುವು ಇವನಿಗೆ ಪ್ರತ್ಯಕ್ಷವಾಗಿ "ಧೃವ, ನಿನ್ನ ಭಕ್ತಿಗೆ ಮೆಚ್ಚಿದೆ. ನಿನಗೆ ಭೂಮಿಯ ಮೇಲೆ ಜಾಗವಿಲ್ಲವೆಹೋದರೆ ಬಾ, ನಿನಗೆ ಒಂದು ನಕ್ಷತ್ರವನ್ನೇ ಕೊಡುತ್ತೇನೆ"ಂದು ಅಭಯ ಹಸ್ತವನ್ನು ನೀಡುತ್ತಾನೆ. ಅದೇ ಉತ್ತರ ದಿಕ್ಕಿನಲ್ಲಿರುವ ಧೃವನಕ್ಷತ್ರ. (ಆದರೆ, ಹಿಂದೆ ಹೇಳಿದ—ಪ್ರಹ್ಲಾದನ ಕಥೆ ನೋಡಿ—ನಕ್ಷತ್ರವೇ ಬೇಗೆ)

ನೀತಿ—ನಮಗೆ ಮನೆಯಲ್ಲಿರಲು ಕಷ್ಟವಾದರೆ, ಕಾಡಿನಲ್ಲಿಯಾಗಲೀ, ಆಕಾಶದಲ್ಲಿಯಾಗಲೀ ಜಾಗವಿದ್ದೇ ಇರುತ್ತದೆ

೪. **ಸಾವಿತ್ರೀ ಕಥೆ**—ಈ ಕಥೆ ಕೇಳಿದ ಮೇಲೆ ನನಗೆ ಮನೇಲ್ಲಿ ಸಿಗೋ ಕಾಫಿ ಸ್ವಲ್ಪ ರುಚಿಯಾಗಿರುತ್ತೆ. ಈ ಕಥೇಲಿರೋ ಸಾರಾಂಶ ಇಷ್ಟೆ. ಒಬ್ಬ ಪತಿ-ಪತ್ನಿಯರ ಪರಸ್ಪರ ಪ್ರೇಮದಿಂದ ದೇವರುಗಳೇ ಹೆದರುತ್ತಾರೆ. ಪತಿಯು ನಾನಾ ಕಷ್ಟಗಳಿಗೆ ಸಿಕ್ಕಿ ಕೊನೆಗೆ ಒಬ್ಬ ದೊಡ್ಡ ಋಷಿಯ ಶಾಪದಿಂದ ತನ್ನ

ಪತ್ನಿಯನ್ನೇ ಕೊಲ್ಲಬೇಕಾಗಿ ಬಂದು—ಆಗ ಯಮರಾಜನೇ ಪ್ರತ್ಯಕ್ಷನಾಗಿ, ಸಾವಿತ್ರಿಯ ಪತಿಭಕ್ತಿಗೆ ಮೆಚ್ಚಿ ಅವಳ ಪತಿಯಾದ ಸತ್ಯವಾನನಿಗೆ ಪ್ರಾಣದಾನ ಮಾಡುತ್ತಾನೆ.

ಇದರಿಂದ ನಮ್ಮ ಹೆಂಗಸರು ಕಲಿಯಬೇಕಾದ ಬಹಳ ನೀತಿಯಿದೆ. ಈಗಿರುವ ರೇಷನ್ ಕಷ್ಟಗಳಲ್ಲಿ ಮನೆಯಲ್ಲಿ ಏನು ಸಾಮಾನಿರುತ್ತೋ, ಏನಿರೋಲ್ವೋ ಒಂದೂ ಗೊಣಗುಟ್ಟದೆ, ಕೆಲಸದಿಂದ ಸುಸ್ತಾಗಿ ಬರುವ ಹೊತ್ತಿಗೆ ನಸುನಗುತ್ತಾ ಒಂದ್ಲೋಟ ....ಸಧ್ಯ ಮುಂದಕ್ಕೆ ಹೇಳಿದರೆ ನನಗೀವಾಗ ಸಿಗೋದೂ ತಪ್ಪಿಹೋದೀತು!

ಈ ನನ್ನ ಸಾಧನೆಯಿಂದ ಮಹಾಜನರಿಗೆ ಉಪಯೋಗವಾದರೆ ನನ್ನ ಜನ್ಮವೇ ಸಾರ್ಥಕವಾಯಿತು. ವಿಶದವಾಗಿ ಕಥೆ ಕೇಳಬೇಕಾದವರು ಕೊರವಂಜೀ ಸಂಪಾದಕರಿಗೆ ಬರೆದರೆ ಕೊರವಂಜಿಯಲ್ಲಿ ತಿಂಗಳಿಗೊಂದೊಂದರ ಹಾಗೆ ಕಥೆ ಬರೆಯುತ್ತೇನೆ.

ಕೇಫ.

ಪುರೋಹಿತರು, ಅಥವಾ......

ಪದಾರ್ಥಗಳಿಗೆಲ್ಲ ಮೂರರಷ್ಟು ನಾಲ್ಕರಷ್ಟು ಬೆಲೆ ಏರಿರುವ ಈಚಿಗೆ, ಹಬ್ಬ ಹುಣ್ಣಿಮೆ ಎಂಬ ಸುದ್ದಿ ಕಿವಿಗೆ ಬಿದ್ದರೆ, ಮೂರ್ತಿಗೆ ಹಗ್ಗ ಹೋಳಿ ಹಾಲಾಹಲ ಮುಂತಾದುವುಗಳ ಚಿತ್ರ ಕಣ್ಣಿಗೆ ಹೊಳೆಯುತ್ತದೆ. ಆಗ ಅವನು ಸಂನ್ಯಾಸಾಶ್ರಮದ ಮಹತ್ವವನ್ನು ಮನನ ಮಾಡುತ್ತಾನೆ. ಆದರೆ, ತಲೆ ಬೋಳಿಸಿಕೊಳ್ಳಬೇಕು, ಮಂತ್ರ ಒದರಬೇಕು, ಮರದ ಮೆಟ್ಟುಗಳ ಮೇಲೆ ನಡಿಯಬೇಕು, ಹುಲಿ ಚರ್ಮ ಹೊರಬೇಕು, ಕೆಮ್ಮಣ್ಣು ಶೇಖರಿಸಬೇಕು, ಕಣ್ಣಿಗೆ ವಿಭೂತಿ ಹಚ್ಚಬೇಕು ....ಥೂ! ಎಲ್ಲಿಯಗೋಳು, ಎಂದು ಅವನು ಸುಮ್ಮನಿರುತ್ತಾನೆ.

ಶ್ರಾವಣ ಮಾಸದ ಒಂದು ಸೋಮವಾರ ನಡುರಸ್ತೆಯಲ್ಲೇ ನಿಂತು ಮೂರ್ತಿ ತನ್ನ ಹೆಂಡತಿ ಕೊಟ್ಟ ಚೀಟಿಯನ್ನು ಓದಿ ನೋಡಿದ.

ಕಡಲೆ ಬೇಳೆ — ೨ ಪಾವು
ಮೆಣಸಿನಕಾಯಿ — ೧ ಆಣೆ
ಸವತಿಕಾಯಿ — ೩
ಬೆಲ್ಲ — ೩ ಅಚ್ಚು (ದೊಡ್ಡದು)
ರವೆ — ೧ ಸೇರು
ಹೂ — ೨ ಆಣೆ
ಊದುಬತ್ತಿ — ೨ ಆಣೆ (ಸಾದಾ ಸಾಕು)
ಬಾಳೆ ಎಲೆ — ೫
ಪುರೋಹಿತರು — ೧ (ಅಥವಾ, ವ್ರತದ ಪುಸ್ತಕ)

ಕಡೆಯ ಪಂಕ್ತಿಯನ್ನೋದಿದಾಗ, ಮೂರ್ತಿಯ ಹೊಟ್ಟೆ ತಣ್ಣಗಾಯಿತು. ಭೀಮನ ಅಮಾವಾಸ್ಯೆ ಮಾಡಿದಾಗಲೂ ಮೂರ್ತಿ ಹೇಳಿದ್ದ "ಬೇಡ! ಸಲಸಲಕ್ಕೂ ಪುರೋಹಿತರನ್ನು ಕರೆಸಿ ಅವರಿಗೆ ದಕ್ಷಿಣೆ, ಕರಿಕಡುಬುಗಳನ್ನು ಕೊಡುವುದಕ್ಕೆ ಬದಲಾಗಿ ವ್ರತದ ಪುಸ್ತಕ ಒಂದು ಕೊಂಡುಕೊಂಡರೆ ಒಳ್ಳೆಯದು" ಅಂತ. ವಿಶಾಲಿಯ ಕಿವಿಗೆ ಅವನ ಮಾತು ಕರ್ಕಶವಾಗಿದ್ದುವು. ಆದರೆ, ಹಿಂದಿನ ಮಂಗಳವಾರದ ಪುರೋಹಿತರು ಮನೆಯಲ್ಲಿದ್ದ ಚಿಲ್ಲರೆ ಎಲ್ಲವನ್ನೂ ದೋಚಿದಾಗ, ವಿಶಾಲಿಗೂ, ಬುದ್ಧಿ ಬಂದು, ಈ ವಾರ "ಪುರೋಹಿತರು ಅಥವಾ........" ಎಂಬ ಅಭಿಪ್ರಾಯಕ್ಕೆ ಒಪ್ಪಿಗೆ ಇತ್ತಳಲ್ಲಾ ಎಂದು ಮೂರ್ತಿ ನಡುರಸ್ತೆಯಲ್ಲೇ ಹಿಗ್ಗಿದ!

"ಪುರೋಹಿತರು ಅಥವಾ ವ್ರತದ ಪುಸ್ತಕ" ಎಂಥಾ ಮುದ್ದಾದ ಬರೆವಣಿಗೆ! ಮಿತವ್ಯಯದ ಸಂಕಲ್ಪ! ಗಂಡನ ಸಂಸ್ಕೃತೋಚ್ಚಾರಣಾ ಸಾಮರ್ಥ್ಯದಲ್ಲಿ ನಂಬಿಕೆ! ಪತಿಯ ಬಾಯಿಂದ ಹೊರಡುವುದೆಲ್ಲ ಸತಿಗೆ ಮಂತ್ರ ಎಂಬ ಉಜ್ವಲವಾದ, ನಿಶ್ಚಲವಾದ, ನೆಚ್ಚಿಕೆ! ಆರ್ಯ ಸ್ತ್ರೀರತ್ನಗಳ ಆದರ್ಶದ ಹಾದಿ. ಮೂರ್ತಿ ಪುಳಕಾಂಗಿಯಾದ. ಹೆಜ್ಜೆ ಹಾಕುತ್ತಾ, ಹಾಕುತ್ತಾ, ಅವನ ಒಳದನಿ "ಪುರೋಹಿತರು........ ಚಿಲ್ಲರೆ........ಡಕಾಯಿತಿ........ರಸ್ತೆ........ಅಫೀಮು........ಪತಿಪತ್ನಿ........ಅರ್ಧನಾರೀಶ್ವರ........" ಎಂದು ಮುಂತಾಗಿ ಹೇಳುತ್ತಲೇ ಇತ್ತು.

ಬೇಗಬೇಗನೆ ಇತರ ಸಾಮಾನುಗಳನ್ನು ಕೊಂಡುಕೊಂಡು, ಮೂರ್ತಿ 'ಅಥವಾ'ದ ಆಚೆ ಬರೆದಿದ್ದ ಪುಸ್ತಕಕ್ಕಾಗಿ ವ್ಯಾಧಿನಾರಾಯಣರ ಅಂಗಡಿಗೆ ನುಗ್ಗಿದ. "ವ್ರತದ ಪುಸ್ತಕ ಇದೆಯೇನ್ರಿ, ಯಾವುದಾದರೂ?" ಎಂದು ಕೂಗುತ್ತ, ಅಲ್ಲಿದ್ದ ಪೀಠದ ಮೇಲೆ ಕೂತಾಗ, ಒಂದು ಸೌತೆಕಾಯಿ ಕೆಳಗೆ ಬಿತ್ತು. ಅದನ್ನ ಅಲ್ಲೇ ಹತ್ತಿರ ಕುಳಿತಿದ್ದ ಹಿಂದಿನವಾರದ ಪುರೋಹಿತರು ತೆಗೆದು ಕೊಟ್ಟರು! "ರಾತ್ರಿ ಹಾಗೆಯೇ ಮನೆ ಕಡೆ ಬರೋಣ ಅಂತಿದ್ದೆ! ಆಗಲೇ ಹೂವು ಹಣ್ಣು ಎಲ್ಲಾನೂ ತೆಗೆದು ಸಿದ್ಧವಾಗಿದೀರಿ!" ಎಂದರು ಪುರೋಹಿತರು, ತಾವು ಓದುತ್ತಿದ್ದ ಪುಸ್ತಕವನ್ನು ಕೈಯಲ್ಲೇ ಹಿಡಿದುಕೊಂಡು! ಮೂರ್ತಿಗೆ ಮಂಕುಬಡಿಯಿತು. "ಪುರೋ

ಹಿತರು—೧, ಅಥವಾ......." ಎಂದು ಬರೆದಿದಾಳೆ. ಇವರಿಗೇ ಹೇಳಿಬಿಡೋಣವೇ ಎಂದು ಒಮ್ಮೆ ಆಂದೋಳನವಾಯಿತು. ಛೆ! ಈ ಸಾರೀನೂ ಇವರಿಗೆ ತೆರುವುದೇ, ಎಂದು ಮತ್ತೆ ಅನುಮಾನ ಹುಟ್ಟಿತು. ಕಡೆಗೆ ಮೂರ್ತಿ, "ನಾಳೆ ನಮ್ಮಲ್ಲಿ ಹಬ್ಬ ಇಲ್ಲ! ಇದು ಶಂಕರು ಮನೆಗೆ! ಅವನಿಗೆ ಹಲ್ಲು ನೋವಂತೆ" ಎಂದ. "ಶಂಕರಪ್ಪ ನವರ ಮನೆಯಲ್ಲಿ ಆಕೆ ಇಲ್ಲವಲ್ಲ!" ಎಂದು ಪುರೋಹಿತರು ಕೇಳಿದಾಗ, "ಶಂಕರಪ್ಪ ನವರ ಸಂಬಂಧ ಯಾರೋ ಬಂದಿದಾರಂತೆ" ಎಂದು ಇನ್ನೊಂದು ಬಾಣ ಬಿಟ್ಟ. ಎಷ್ಟು ಹೊತ್ತಾದರೂ ಪುರೋಹಿತರು ಅಲ್ಲಿಂದ ಕದಲಲೇ ಇಲ್ಲ. ಮೂರ್ತಿಗೆ ಕಾದು ಕಾದು ಸಾಕಾಯಿತು. ಕಡೆಗೆ, "ವ್ರತದ ಪುಸ್ತಕ ಕೊಡಿ" ಎಂದು ಮಾಲೀಕರನ್ನ ಕೇಳೇಬಿಟ್ಟ ಧೈರ್ಯವಾಗಿ. "ಓ! ಇಲ್ಲೇ ಇದೆ!" ಎಂದು ಹೇಳಿ, ಪುರೋಹಿತರು ತಾವು ಓದುತ್ತಿದ್ದ ಪುಸ್ತಕವನ್ನ ಮೂರ್ತಿ ಕೈಯ್ಯಲ್ಲಿಟ್ಟರು. "ಎರಡೂವರೆ ರೂಪಾಯಿ ಬೆಲೆ" ಎಂದು ವ್ಯಾಧಿನಾರಾಯಣರು ಹೇಳಿದ್ದಕ್ಕೆ ತುಟಿ ಪಿಟಕೆನ್ನದೆ, ಅದಷ್ಟನ್ನೂ ಕೊಟ್ಟು, ಗ್ರಂಥವನ್ನು ಕೊಂಕುಳಿಗೆ ಸೇರಿಸಿ, ಮೂರ್ತಿ ಮನೆಗೆ ಬಂದ. ಆಗಲೇ ಗಂಟೆ ೯॥ ಆಗಿತ್ತು. ವಿಶಾಲಿಗಂತೂ ಮಹದಾನಂದ ವಾಯಿತು. ಮುಂದಿನ ನಾಲ್ಕೇ ನಾಲ್ಕು ಹಬ್ಬಗಳಲ್ಲಿ ಎರಡೂವರೆ ರೂಪಾಯನ್ನೂ ಉಳಿಸಬಹುದೆಂದು ಅವರು ಕುಣಿದಾಡಿದರು.

ಬೆಳಿಗ್ಗೆ ಎದ್ದು ದಂಪತಿಗಳಿಬ್ಬರೂ ಸ್ನಾನಮಾಡಿ, ಒಟ್ಟಿಗೆ ಪೂಜೆಗೆ ಅಣಿಮಾಡಿ ದರು. ಸುಮಾರು ೯ ಗಂಟೆ ಹೊತ್ತಿಗೆ ಮೂರ್ತಿ ಚೀನಾಂಬರವನ್ನುಟ್ಟು, ವೀಭೂತಿ ಹಚ್ಚಿಕೊಂಡು ಷರ್ಟು ಬನಿಯನ್ ಯಾವುದೂ ಧರಿಸದೆ, ವಿಶಾಲಿ ತಂದಿರಿಸಿದ ಮಣೆ ಮೇಲೆ, ಗಂಭೀರವಾಗಿ ಪುಸ್ತಕ ಸಮೇತ ಕುಳಿತ. "ಪ್ರಾರಂಭ ಮಾಡು" ಎಂದು ಹೇಳಿ, ಪುಸ್ತಕ ಬಿಚ್ಚಿ ಹುಡುಕಿದರೆ, ಅದರಲ್ಲಿ ಮಂಗಳಗೌರಿ ವಿಷಯವೇ ಇಲ್ಲ. ಕೊನೆಯ ಪುಟದಲ್ಲಿ "ಮಂಗಳಂ" ಎಂಬ ಮಾತನ್ನು ಮಾತ್ರ ಅಚ್ಚುಹಾಕಿದ್ದರು. ಅದು ಯಾವುದೋ "ವೇದಾಂತ ಸಾರ!" ಮೂರ್ತಿಗೆ ತುಂಬಾ ರೇಗಿತು. ಪಕ್ಕದ ಮನೆಯಿಂದ ಬೈಸಿಕಲ್ಲನ್ನು ಸಾಲ ಪಡೆದು ಷರ್ಟು ತೊಟ್ಟು ಅಂಗಡಿಗೆ ವೇದಾಂತ ಸಾರದ ಸಹಿತ ಸರಸರನೆ ತುಳಿದ. ಅಂಗಡಿ ಬಾಗಿಲು ಹಾಕಿತ್ತು. ಆದರೆ,—ಸದ್ಯಃ ಅಂಗಡಿ ಪಡಸಾಲೆಯಲ್ಲಿ ಪುರೋಹಿತರು ಕುಳಿತಿದ್ದರು. ಆಗಿನ ಭರಾಟೆಯಲ್ಲಿ ಮೂರ್ತಿಗೆ ಮಿಕ್ಕೆಲ್ಲ ಸಮಾಚಾರವೂ ಮರೆತುಹೋಗಿತ್ತು! "ಸ್ವಾಮಿ! ಬೇಗ! ಬೇಗ ಬನ್ನಿ! ಮನೆಗೆ ಬಂದು ಪೂಜೆ ಮಾಡಿಸಿಬಿಡಿ" ಎಂದ.

ಪುರೋಹಿತರು ತಕ್ಷಣವೇ ಎದ್ದು, ಮಾತನಾಡದೆ ಮೂರ್ತಿಯ ಹಿಂದೆ ನಡೆ ದರು. ಕೊನೆಗೂ ಅವರೇ ಗೆದ್ದರು.

—ನಾ. ಕೆ.



ಲೋಧ್ರ—ಗರ್ಭಾಶಯ ಟಾನಿಕ್

ಅಕ್ರಮ ಮುಟ್ಟು, ಬಂಜೆತನ, ಗರ್ಭಜನಾಯು, ನಿದ್ರಾಭಂಗ, ಅಜೀರ್ಣ, ಮಲಬದ್ಧತೆ, ಕೆಮ್ಮು, ತಲೆನೋವು, ಬೆನ್ನುನೋವು ಮುಂತಾದುವನ್ನು ವಾಸಿಮಾಡುವುದು.

ಅರ್ಕ—ಶ್ರೇಷ್ಠ ಜ್ವರ ನಿವಾರಿಣಿ

ಇನ್‌ಫ್ಲೂಯೆಂಜಾ, ಟೈಫಾಯಿಡ್, ಮಲೇರಿಯ ಮುಂತಾದ ಎಲ್ಲಾ ವಿಧವಾದ ಜ್ವರಗಳನ್ನೂ ಪ್ಲೀಹ ಮತ್ತು ಪಿತ್ತಕೋಶ ರೋಗಗಳನ್ನೂ ಗುಣಪಡಿಸುವುದು.

ಅಮೃತ—ರಕ್ತಶುದ್ಧಿ ಟಾನಿಕ್

ಎನೀಮಿಯ, ಮಲಬದ್ಧತೆ, ಅಜೀರ್ಣ, ನಿಶ್ಶಕ್ತಿ, ಬುದ್ಧಿಮಾಂದ್ಯ, ಎದೆಯ ನಿಶ್ಶಕ್ತಿ, ಜ್ಞಾಪಕಶಕ್ತಿ ಇಲ್ಲದಿರುವದು, ದೃಷ್ಟಿಮಾಂದ್ಯ, ತಲೆ ತಿರುಗುವುದು, ಚರ್ಮ ರೋಗಗಳು ಮುಂತಾದುವನ್ನು ವಾಸಿಮಾಡುವುದು.

ಏಜಂಟರು :

ಸಿಟಿ ಮೆಡಿಕಲ್ ಅಂಡ್ ಜನರಲ್ ಏಜನ್ಸಿ,

ಚಿಕ್ಕಪೇಟೆ, : : : ಬೆಂಗಳೂರು ಸಿಟಿ.

ಪಂತುಲಮ್ಮ

ಸಾರಥಿಯವರ ಉತ್ತಮ ತಯಾರಿಕೆ

●

— ದಿಗ್ದರ್ಶಕರು —

ಶ್ರೀ ರಾಮಬ್ರಹ್ಮಂ

●

ಮೂವಿಲ್ಯಾಂಡಿನಲ್ಲಿ

ಪ್ರದರ್ಶಿಸುವ ತಾರೀಖನ್ನು ಎದುರು ನೋಡಿ

ವಿವರಗಳಿಗೆ—

ಚಂದ್ರ ಫಿಲ್ಮ್ಸ್ ಲಿಮಿಟೆಡ್

ಗಾಂಧಿನಗರ, ಬೆಂಗಳೂರು

— ಇವರಿಗೆ ಬರೆಯಿರಿ

Printed by B. S. Iyengar, Bangalore City.
Publisher—B. N. Gupta, Editor—M SHIVARAM.